

## ಕುಲಪತಿಗಳ ನುಡಿ

ಸಂಸ್ಕೃತವೆಂದ ಕೂಡಲೇ ವಿದ್ಯಾವಂತರೆನಿಸಿಕೊಂಡಿರುವ ಅನೇಕರಲ್ಲಿ ಇಂದಿಗೂ ಕೂಡ ಭಿನ್ನವಾದ ಅಭಿಪ್ರಾಯಗಳು ವ್ಯಕ್ತವಾಗುವುದನ್ನು ಗಮನಿಸಬಹುದು, ಸಂಸ್ಕೃತವೆಂದರೆ ಕೇವಲ ವೇದ, ಉಪನಿಷತ್ತುಗಳು ಎಂಬ ಅಭಿಪ್ರಾಯ ಚಾಲ್ತಿಯಲ್ಲಿದೆ. ವಾಸ್ತವವಾಗಿ ಸಂಸ್ಕೃತ ಭಾಷೆ ಕೇವಲ ಸಾಹಿತ್ಯವಲ್ಲ, ಜೀವನ ವಿಧಾನ, ಜೀವನ ದರ್ಶನ. ಇದರ ವ್ಯಾಪ್ತಿ ವಿಸ್ತೃತವಾದುದು.

ಸಂಸ್ಕೃತ ಮತ್ತು ಸಂಸ್ಕೃತಿ ಇವೆರಡೂ ಒಂದಕ್ಕೊಂದು ಪೂರಕ. ಇವುಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ನಮ್ಮ ಸಂಸ್ಕೃತಿಯನ್ನು ಅರಿಯಲು ಸಂಸ್ಕೃತಭಾಷೆ ಅತ್ಯಂತ ಆವಶ್ಯಕ. ನಮ್ಮ ಪ್ರಾಚೀನ ವೇದಾಂತ ತತ್ವಗಳು, ಆಚಾರ – ವಿಚಾರ, ವಿಧಿ ನಿಷೇಧಗಳು, ಸಂಪ್ರದಾಯ ಪದ್ಧತಿಗಳು, ವರ್ತಮಾನ ಕಾಲದ ಜೀವನ ವಿಚಾರಗಳು ಮುಂತಾದುದನ್ನು ಅರಿಯಲು ಸಂಸ್ಕೃತ ಕೈದೀವಿಗೆ. ಏಕೆಂದರೆ, ಸಂಸ್ಕೃತ ಭಾಷೆಯಲ್ಲಿ ಜ್ಞಾನದ ಪ್ರತಿಯೊಂದು ಶಾಖೆಗೆ ಸಂಬಂಧಿಸಿದಂತೆ ಅಭಿವ್ಯಕ್ತಿ ಇದೆ; ಸಂಬಂಧಪಟ್ಟಂತೆ ಅನೇಕ ಗ್ರಂಥಗಳಿವೆ. ಸಂಸ್ಕೃತವನ್ನು ಕಲಿಯುವುದೆಂದರೆ ಇಂತಹ ಅಪೂರ್ವ ಜ್ಞಾನಭಂಡಾರಕ್ಕೆ ಪ್ರವೇಶ ಪಡೆದ ಹಾಗೆ. ಸಂಸ್ಕೃತಕ್ಕೆ ಸಂಬಂಧಿಸಿದ ತಾಳೆಗರಿಗಳು ನಮ್ಮ ದೇಶದಲ್ಲಿ ಸುಮಾರು 5 ಲಕ್ಷದಷ್ಟಿವೆ. ಇವುಗಳಲ್ಲಿರುವ ಜ್ಞಾನರಾಶಿಯನ್ನು ನಾವು ಇನ್ನೂ ಹೊರತರಬೇಕಿದೆ. ಆಯುರ್ವೇದ, ಗೀತೆ, ವೇದಾಂತ, ವಾಸ್ತುಜ್ಯೋತಿಷ್ಯಗಳು ಇಂದು ಹಿಂದೆಂದಿಗಿಂತಲೂ ಹೆಚ್ಚಿನ ಮಹತ್ವ ಪಡೆಯುತ್ತಿವೆ.

ಭಾರತೀಯ ಚಿಂತನೆಯು ಎಲ್ಲರನ್ನೂ ಒಳಗೊಳ್ಳುವ ಏಕಾತ್ಮಚಿಂತನೆಯನ್ನು ಪ್ರಧಾನವಾಗಿ ಹೊಂದಿವೆ. 'ಏಕಂ ಸತ್ ವಿಪ್ರಾಃ ಬಹುಧಾ ವದಂತಿ', 'ವಸುಧೈವ ಕುಟುಂಬಕಮ್' ಮುಂತಾದ ಸಂಸ್ಕೃತಭಾಷೆಯ ಮಾತುಗಳು 'ವಿಶ್ವಮಾನವ' ಪ್ರಜ್ಞೆಯ ತತ್ತ್ವಕ್ಕೆ ಪುಷ್ಟಿಕೊಡುತ್ತವೆ. ಪ್ರಸ್ತುತವಾಗಿ, ಕಾಲದಲ್ಲಿ ಇಂತಹ ಚಿಂತನೆಗಳೇ ಹಿಂದೆಂದಿಗಿಂತಲೂ ಮುಖ್ಯವಾಹಿನಿಗೆ ಅಗತ್ಯವಾಗವೆ.

ಪ್ರಾಚೀನ ಭಾರತದಲ್ಲಿ ವಿಜ್ಞಾನ ತಂತ್ರಜ್ಞಾನಗಳು ಬಹಳ ಮುಂದುವರಿದಿದ್ದವು ಎಂದು ಕೇವಲ ಅಭಿಮಾನ ಪಡುವುದರಲ್ಲಿ ಇಂದು ಯಾವುದೇ ಅರ್ಥವಿಲ್ಲ. ಅಂತಹ ಪ್ರಾಚೀನ ವಿಜ್ಞಾನ ತಂತ್ರಜ್ಞಾನಗಳನ್ನು ಬಳಸಿಕೊಂಡು ಇಂದಿನ ವಿಜ್ಞಾನ ತಂತ್ರಜ್ಞಾನ ಶಾಖೆಗಳು ಹೇಗೆ ಮುನ್ನಡೆಯಲು ಸಾಧ್ಯ ಎಂದು ನಿರೂಪಿಸುವತ್ತ ಇಂದಿನ ಯುವ ಜನತೆ, ಸಂಸ್ಕೃತ ವಿದ್ವಾಂಸರು ಗಮನ ಹರಿಸಬೇಕು. ಆ ನಿಟ್ಟಿನಲ್ಲಿ ಇಂತಹ ಸಂಚಿಕೆಗಳು ಸಹಕಾರಿಯಾಗಿ ನಿಲ್ಲುತ್ತವೆ. ಸಾಗಬೇಕಾದ ಹಾದಿಯನ್ನು ನಿರ್ದೇಶಿಸುತ್ತವೆ.

**ಪ್ರೊ. ಪದ್ಮಾಶೇಖರ್**

**ಕುಲಪತಿ**



# सम्पादकीयम्

समतीतेषु अष्टसु वर्षेषु कर्नाटक–संस्कृत–विश्वविद्यालयः संस्कृतभाषायाः संरक्षणे संवर्धने च निहितनितान्तप्रयत्नो वर्तते । एवञ्च संस्कृतस्य पुरोभिवृद्ध्यर्थमेव संस्थापितोऽयं विश्वविद्यालयः वैशिष्टचेन व्यवस्थितरीत्या च कार्यं चर्करीति येन सः विदुषामितरेषाञ्ज समेषामतितरामभिमतो राराष्टि । आधुनिके प्रपञ्चे संस्कृताध्ययनस्य प्रासङ्गिकमह वं तथा च क ा प्रभृतिषु प्रान्तभाषासु रचनावैद ध्यं विविदिषुभिः संस्कृतभाषाव्युत्पत्तिरवार्या ति ोषं ोषं समभिव्यनक्ति विश्वविद्यालयः । एतस्यां दिशि स ा सोत्साहं ाम्यता विश्वविद्यालयेन ये येऽपि कार्य माः समायोजिता अभवन तान वार्तापत्रमिदं संग्रह पेणाव ामयति ।

संस्कृत– ्रन्थ–पुरस्कारप्रदानकार्य मः संस्कृतनाटकसाहित्यमधिकृत्य निर्वर्तिता रा ीयविचारसं ो ी ज्यौतिषकार्या ारः विश्वविद्यालयस्य अष्टमः संस्थापनदिनोत्सवः नैकेषु महाविद्यालयेषु पा शालासु च समाच रताः संस्कृतोत्सवकार्य माः रा ीय–सेवा–योजनायाः नायकत्वशिबिरं ु पर्णिमासमारम्भाः संस्कृतभाषाप्रवेश ोधनाव ाः– त्यादीनां विवरणमन्तर्णिहितमस्ति वार्तापत्रस्य अस्यामवतरणिकायाम । विश्वविद्यालय ारा प्रद ायाः प्रथमायाः विद्यावा रधि पदव्याः विवरणम ा विशिष्यते ।

अस्य वार्तापत्रस्य ारा राज्यस्य वि न्मान्यानां सविधे संस्कृतसम ान्धिकार्य माणां वृ ान्तमुपस्थाप्य धन्यतरा सम्पद्यत यं वार्तापत्रिका । एवञ्च मतै येन मत्यै येन चानु तानि कार्याण्येव स लीभवन्तीति सन्देशस्य वाहिनी चापि सन्ति ते ।

ति वि ज्जनानुशास्यः

**ा सन्तोषः हान ल्ल**

उपनिर्देशकः, प्रसाराङ्गम्

Karnataka Sanskrit University Faculty of Language

In collaboration with INDIAN COUNCIL OF PHILOSOPHICAL RESEARCH (ICPR), New Delhi

# National seminar on Philosophical thoughts in Sanskrit Drama Literature

**27-28 March 2018**

**Dr. C. Palaiah**

**Associate Professor KSU-18**



The national seminar under Report was held for two days, from 27th to 28th of March 2018. The Seminar is a collaboration Indian Council Of Philosophical Research (ICPR), New Delhi. The Venue of the Seminar was the Karnataka Sanskrit University premises and Akkamahadevi Seminar hall Kannada Sahitya Parishat Chamarajpet on 27th to 28th of March 2018 As many as 12 scholars were invited, more than 30 scholars were presented their valuable papers and more the 100 participants were registered in the seminar. It was inaugurated by Hon'ble Vice-Chancellor, Prof. Padmashekar. The Felicitation Address was given by Prof Ramarathnam VC and Prof G.S.R. Krishnamurthy Dept. of Sahitya Rashtriya Vidyapeeta Tirupathi, A.P. delivered the Key-note Address.

The Details of programme Date wise and Session wise

### Ist Session

**Date: 27.03.2018, Tuesday Time: 12.00PM to 1.00PM**

**Venue: Akkamahadevi Auditorium,** Kannada Sahitya Parishat, Chamarajpet, Bengaluru.

**Chair Person:Dr. Chakradhar Behera,** Dept. of Sanskrit, Pondicherry University, Puducherry

**Speaker:Dr. Manoranjan Senapaty,** Associate Professor, P.G. Dept. of Sanskrit, Utkal University, Vani Vihar, Bhubaneswar-751004

**Topic :** Educational Philosophy in Kalidasa's Drama Papers of registered participants were presented.

### IInd Session

**Date: 27.03.2018, Tuesday , Time: 2.00PM to 3.30PM**

**Venue: KSU Auditorium,** Pampa Mahakavi Road, Chamarajpet, Bengaluru.



**Chair Person: Dr. Debajyoti Jena,** HOD, Dept. of Sanskrit & Indian Culture, SCSVMV University, Enathur, Kanchipuram.

**Speaker:Dr. Ujjwal Jana,** Assistant Professor, Dept. of English, Pondicherry University, Puducherry.

**Topic:** Philosophical resonances in Sudrakas's Mrichchakatikam Papers of registered participants were presented.

**IIIrd Session**

**Date: 27.03.2018, Tuesday , Time: 3.45PM to 5.15PM**

**Venue: KSU Auditorium,** Pampa Mahakavi Road, Chamarajpet, Bengaluru.

**Chair Person : Dr. Pavamanacharya M.,** Sri Chamarajendra Sanskrit College, Chamarajpet, Bangalore.

**Speaker:Dr. P.V. Thothadrinathan,** Professor, Dept. of Samhitha Siddhanta, Sri Sairam Ayuvedic Medical College & Research Centre, Chennai.

**Topic: सङ्कल्पसूर्योदये परपक्षप्रतिक्षेपः**

**Ist Session**

**Date: 28.03.2018, Wednesday, Time: 10.00AM to 11.30AM**

**Venue: Akkamahadevi Auditorium,** Kannada Sahitya Parishat, Chamarajpet, Bengaluru.

**Chair Person:Dr. B.V. Venkataramana,** Dean, Faculty of Shastra, Karnataka Samskrit University, Bengaluru.

**Speaker: Dr. Prabha Shankar Dwivedi,** Assistant Professor of English, Dept. of Humanities and Social Sciences, IIT-Tirupati, Tirupati.

**Topic:** Environmental Philosophy and Uttararāmacarita:

A Study in relation to Concomitance, Correspondence, and Simultaneity Papers of registered participants were presented

**IInd Session**

**Date: 28.03.2018, Wednesday, Time: 11.45AM to 1.15PM**

**Venue: Akkamahadevi Auditorium,** Kannada Sahitya Parishat, Chamarajpet, Bengaluru.

**Chair Person: Vidushi Sharavati Bhat,** Dept. of Alankara Shastra, Shreemata Samskrit college Ummachagi, Yellapur, Uttara Kannada.

**Speaker: Dr. Raghavendra Bhat,** Dept. of Sahitya, Rashtriya Samskrit Samsthan, Rajiv Gandhi Campus, Sringeri

**Topic:उत्तररामचरिते दार्शनिकविचारः** Papers of registered participants were presented

The valedictory function was held at 2.30 p.m. on the 28th March 2018. It was presided over by the Prof V. Girishachandra, Dean Faculty of Language Karntaka Sanskrit University. Dr. A.Haridasa Bhatta , Former Principal of Poornaprajna samskrit College Bangalore delivered the Valedictory Address. Three participants, one from Tirupathi, another from Pocdicherry and yet another from Karnataka made observations about the conduct of the Seminar. Certificates were distributed to the paper presenters as well as observers. Delegates came from various states such as Tirupathi, Chennai, Westbengal and Pondicherry. Food and accommodations were provided to all the delegates and observers, from breakfast, tea, lunch, tea and dinner. Abstracts, delegate materials, bag, writing pad, and pen were given to the participants and dignitaries. On the whole, the Seminar was a grand success. All the delegates were also taken around the campus of beautiful University, and were all very happy about the Conference.

# ಜ್ಯೋತಿಷ್ಯ ಕೇವಲ ಹೇಳಿಕೆಯಲ್ಲ, ವೈಜ್ಞಾನಿಕ ಸತ್ಯ; ಪ್ರೊ. ಪದ್ಮಾಶೇಖರ್

ವರದಿ: **ಡಾ.ಭಾಸ್ಕರ್ ಭಟ್ಟ ಜೋಶಿ**
**ಸಹಾಯಕ ಪ್ರಾಧ್ಯಾಪಕರು, ಕಸಂವಿ,ಬೆಂ,**



ಜ್ಯೋತಿಷ ಕೇವಲ ಹೇಳಿಕೆಯಲ್ಲ, ಅದೊಂದು ವೈಜ್ಞಾನಿಕ ಮನೋಭಾವ ಇದ್ದಾಗ ಮಾತ್ರ ಅದು ವಾಸ್ತವಕ್ಕೆ ಹತ್ತಿರವಾಗುತ್ತದೆ. ಜ್ಯೋತಿಷಿಗಳು ಜನಪರವಾಗಿ, ಜೀವನ್ಮುಖಿಯಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಬೇಕು ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪದ್ಮಾಶೇಖರ್ ಹೇಳಿದರು. ದಿನಾಂಕ 29.07.2018ರ ಭಾನುವಾರ ವಿಜಯ ಕರ್ನಾಟಕ ಬೋಧಿವೃಕ್ಷ ಸಿರಿಚುಯಲ್ ಕನೆಕ್ಟ್ ಅಡಿಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ, ಕರ್ನಾಟಕ ರಾಜ್ಯದ ಜ್ಯೋತಿಷಿ ಹಾಗೂ ಜ್ಯೋತಿಷ ಭೋಧನಾ ಒಕ್ಕೂಟಗಳ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಜ್ಯೋತಿಷ ಸಲಹಾ ಶಿಬಿರದಲ್ಲಿ ಅವರು ಮಾತನಾಡಿದರು. “ಜನರ ಮನಸ್ಥಿತಿ ವಿಭಿನ್ನವಾಗಿ ರುತ್ತದೆ. ನಮ್ಮ ದೃಷ್ಠಿ ಸರಿ ತಪ್ಪುಗಳ ನಿರ್ಣಯಕ್ಕಿಂತ ಮನಸ್ಥಿತಿ ಸರಿಪಡಿಸುವ ನಿಟ್ಟಿನಲ್ಲಿರಬೇಕು. ಈ ಹಿನ್ನಲೆಯಲ್ಲೇ ಸಂಸ್ಕೃತ ವಿಶ್ವವಿದ್ಯಾಲಯ ವೈಜ್ಞಾನಿಕವಾದ ಜ್ಯೋತಿಷ ಶಾಸ್ತ್ರಕ್ಕೆ ಆದ್ಯತೆ ನೀಡುತ್ತಿದೆ. ಈ ವಿಭಾಗದಲ್ಲಿ ಸುಮಾರು 55 ಸಂಸ್ಥೆಗಳು ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿ ಸುತ್ತಿದ್ದು, 800ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜ್ಯೋತಿಷ ಅಧ್ಯಯನ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ

ಜ್ಯೋತಿಷದಲ್ಲಿ ಬಿ.ಎ. ಹಾಗೂ ಎಂ.ಎ ಪದವಿ ಪ್ರಾರಂಭಿಸಲಾಗುವುದು," ಎಂದು ಕುಲಪತಿ ಪ್ರೊ.ಪದ್ಮಾಶೇಖರ್ ಹೇಳಿದರು.

ಕರ್ನಾಟಕ ರಾಜ್ಯದ ಜ್ಯೋತಿಷರ ಹಾಗೂ ಜ್ಯೋತಿಷ ಭೋಧನಾ ಸಂಸ್ಥೆಗಳ ಒಕ್ಕೂಟಗಳ ಅಧ್ಯಕ್ಷ ಡಾ.ಕೃಷ್ಣಕುಮಾರ್ ಮಾತನಾಡಿ 'ಜ್ಯೋತಿಷ ಒಂದು ಇಂಡಿಕೇಟರ್ ಅಷ್ಟೇ, ಆದರೆ ಅದುವೇ ಪ್ರಿಡಿಕ್ಟರ್ ಅಲ್ಲ. ಜ್ಯೋತಿ ಎಂದಿಗೂ ಸುಳ್ಳಲ್ಲ. ಆದರೆ ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ಜ್ಯೋತಿಷಿ ಸುಳ್ಳಾಗಬಹುದು. ಜನ ನಂಬಿ ನಮ್ಮ ಬಳಿ ಬರುತ್ತಾರೆ. ಅವರ ನಂಬಿಕೆಯನ್ನು ದೃಢಪಡಿಸಬೇಕು ಇಲ್ಲದೇ ಭಯಪಡಿಸುವುದು ಸರಿಯಲ್ಲ. ಈ ಅಂಶವನ್ನು ತೈತ್ತರೀಯ ಉಪನ್ನಿಷತ್ತಿನ ವಾಕ್ಯವೂ ದೃಢಪಡಿಸುತ್ತದೆ,' ಎಂದರು. ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಓಂಕಾರಾಶ್ರಮದ ಸ್ವಾಮಿ ಮಧು ಸೂಧನಾನಂದಪುರಿ ಸ್ವಾಮೀಜಿ 'ಜ್ಯೋತಿಷ ಶಾಸ್ತ್ರವು ಸಿದ್ಧಾಂತವನ್ನು ಆಧರಿಸಿದೆ. ಗ್ರಹಗತಿಗಳ ಸ್ಥಾನವನ್ನು ಸೂಚಿಸಿತ್ತದೆ. ಹಾಗಾಗಿ ಜ್ಯೋತಿಷ ಶಾಸ್ತ್ರದ ಪ್ರಕಾರ ಸೂಚಿಸುವ ಪರಿಹಾರವು ವೈಜ್ಞಾನಿಕವಾಗಿರುತ್ತದೆಂಬೋ ಹೊರತು ಅವೈಜ್ಞಾನಿಕವಲ್ಲ,' ಎಂದರು.

ಜ್ಯೋತಿಷ ಸಲಂತಾ ಶಿಬಿರಕ್ಕೆ ಬೆಳಗಿನಿಂದಲೇ ಜನ ಕಿಕ್ಕಿರಿದು ನೆರೆದಿದ್ದರು, ಬಹುತೇಕರು ಟೆಕ್ಕಿಗಳು, ಯುವಕರೇ ಹೆಚ್ಚಿದ್ದುದು ವಿಶೇಷ. ಹಿರಿಯ ನಾಗರಿಕರು, ಮಹಿಳೆಯರಿಗೆಂದೇ ಪ್ರತ್ಯೇಕ ಕೌಂಟರ್ಗಳಿದ್ದವು. ಜ್ಯೋತಿಷ, ಜಾತಕ ವಿಭಾಗಕ್ಕೆಂದೇ ಪ್ರತ್ಯೇಕ 4 ಕೌಂಟರ್‌ಗಳನ್ನು ತೆರೆಯಲಾಗಿತ್ತು. ಹಸ್ತಸಾಮುದ್ರಿಕ, ವಾಸ್ತು, ಪ್ರಶ್ನಾಶಾಸ್ತ್ರ, ಸಂಖ್ಯಾಶಾಸ್ತ್ರದ ಕೌಂಟರ್‌ಗಳಲ್ಲೂ ಯುವಕರೇ ಹೆಚ್ಚಿದ್ದರು. ಸುಮಾರ ಐವತ್ತಕ್ಕೂ ಹೆಚ್ಚು ಜ್ಯೋತಿಷಿಗಳು ಜನರಿಗೆ ಸೂಕ್ತ ಸಲಹೆ ನೀಡಿದರು.

ಡಾ.ಟಿ.ಎಸ್. ವಾಸನ್, ಡಾ. ಆರುಳಾಲಲನ್, ವಿಜಯ ಕಾಲೇಜಿನ ಗೌರವ ಕಾರ್ಯದರ್ಶಿ ಪ್ರೊ. ಆರ್.ವಿ. ಪ್ರಭಾಕರ್, ಡಾ.ಎಸ್.ಕೆ. ಜೈನ್, ಪ್ರೊ.ಎಚ್.ಚಂದ್ರಶೇಖರ್, ಶ್ರೀ ಹರಿದಾಸ್, ಡಾ. ಆನಂದತೀರ್ಥಾಚಾರ್, ಡಾ.ಅನಂತರಾಘವನ್,



ಜ್ಯೋತಿಷ ಬೋಧನಾ ಒಕ್ಕೂಟದ ಕಾರ್ಯದರ್ಶಿ ಬಿ. ಗಜೇಂದ್ರ ಮತ್ತಿತರರು ಭಾಗವಹಿಸಿದ್ದರು.

**ಕೃಷ್ಣಕುಮಾರ್ ಸಾಫ್ಟ್‌ವೇರ್ ಉದ್ಯಮಿ (ಅನಿಸಿಕೆಗಳು):** ಪ್ರತಿಯೊಬ್ಬರ ಮನಸ್ಸಿನಲ್ಲೂ ಒಂದು ಗೊಂದಲ, ತಳಮಳವಿರುತ್ತದೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ತವಕವಿರುತ್ತದೆ. ಈ ದಿಸೆಯಲ್ಲಿ ಪತ್ರಿಕೆ ಹಮ್ಮಿಕೊಂಡಿರುವ ಜ್ಯೋತಿಷ ಸಲಹಾ ಶಿಬಿರ ಉಪಯುಕ್ತವಾಗಿದೆ, ಜ್ಯೋತಿಷದ ಬಗೆಗಿನ ತಪ್ಪು ಅಭಿಪ್ರಾಯಗಳು ದೂರಗುವಂತೆ ಮಾಡಿದೆ ಈ ವಿಷಯದಲ್ಲಿ ಆಸಕ್ತಿ ಹುಟ್ಟಿಸಿದೆ. ಯೋಗೀಶ ವಿಸಾ ಕೌನ್ಸಲರ್, ಬೆಂಗಳೂರು

ಜ್ಯೋತಿಷ ಸಲಹಾ ಶಿಬಿರ ಸಾಕಷ್ಟು ತೃಪ್ತಿ ತಂದಿತು. ನನ್ನನು ಕಾಡುತ್ತಿದ್ದ ಬಹುತೇಕ ಸಮಸ್ಯೆಗಳಿಗೆ ಪರಿಹಾರ ದೊರಕಿದಂತಾಯಿತು. ಇಂತಹ ಕಾರ್ಯಕ್ರಮಗಳು ಮತ್ತಷ್ಟು ನಡೆಯಬೇಕು.

ರಾಜಕುಮಾರ್ ಟಿಕಿ ಮತ್ತು ವಿಜಯಲಕ್ಷ್ಮಿ ಗೃಹಿಣಿ ಜ್ಯೋತಿಷ ಶಿಬಿರದಂತಹ ಕಾರ್ಯಕ್ರಮ ಆಯೋಜಿಸಿದಾಗ ಜನರಲ್ಲಿ ಜ್ಯೋತಿಷದ ಬಗ್ಗೆ ಸ್ಪಷ್ಟತೆ ಬರುತ್ತದೆ. ನೈಜ ಜ್ಯೋತಿಷಗಳು ಬೆಳಕಿಗೆ ಬರುವಂತಾಗುತ್ತದೆ. ಶಿಬಿರದಲ್ಲಿ ಪಾಲ್ಗೊಂಡ ನಂತರ ನಮ್ಮಲ್ಲೂ ಉತ್ಸಾಹ ಮೂಡಿದೆ. ಜ್ಯೋತಿಷ ವಿದ್ಯಾರ್ಥಿಯಾಗುವ ಆಸೆ ಮೂಡಿದೆ ಎಂದು ತಿಳಿಸಿದರು.

## ಸರ್ವರಿಗೂ, ಸರ್ವವಿಧದಲ್ಲಿ ಇರುವುದೇ ಸ್ವಾತಂತ್ರ್ಯ

**ವಿದ್ವಾನ್ ಆರ್. ತಿಮ್ಮಣ್ಣ**
ಸಂಶೋಧನಾ ಸಹಾಯಕರು, ಕಸಂವಿ



72ನೇ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ದಿನಾಂಕ 15.08.2018ರಂದು ಬೆಳಗ್ಗೆ 8 ಘಂಟೆಗೆ ಮಾನ್ಯ ಕುಲಪತಿಗಳಾದ ಪ್ರೊ. ಪದ್ಮಾಶೇಖರ್ ಅವರು ಧ್ವಜಾರೋಹಣವನ್ನು ಮಾಡಿ, ಸ್ವಾತಂತ್ರ್ಯ ದಿನಾಚರಣೆಯು ಕೇವಲ ರಜೆಯನ್ನು ತೆಗೆದುಕೊಂಡು ದಿನವನ್ನು ವ್ಯರ್ಥಮಾಡುವುದಲ್ಲ. ಅದರ ತರುವಾಯ ತಾವುಗಳು ತಮ್ಮತಮ್ಮ ಬಗೆಗೆ ಆತ್ಮವಲೋಕನವನ್ನು ಮಾಡಿಕೊಳ್ಳಬೇಕು. ಸ್ವಾತಂತ್ರ್ಯಕ್ಕಾಗಿ ದುಡಿದ ಮಹನೀಯರ ತ್ಯಾಗ, ಬದ್ಧತೆ, ಕೆಚ್ಚೆದೆಯ ಹೋರಾಟ ಹಾಗೂ ರಾಷ್ಟ್ರ ಭಕ್ತಿಯ ಬಗೆಗೆ ಚಿಂತನೆ ಮಾಡಿ, ಅವರ ಆದರ್ಶಗಳನ್ನು ನಮ್ಮೊಳಗೆ ಅಳವಡಿಸಿಕೊಳ್ಳಬೇಕು ಎಂದು ಹಿತನುಡಿ ಗಳನ್ನಾಡಿದರು. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯುದ ಎಲ್ಲ ಬೋಧಕ- ಬೋಧಕೇತರ ವರ್ಗದವರು ಹಾಜರಿದ್ದರು.

# ವಿಶ್ವವಿದ್ಯಾಲಯ ಸಂಸ್ಥಾಪನ ದಿನಾಚರಣೆ

ವರದಿ: **ವಿದ್ವಾನ್ ಆರ್. ತಿಮ್ಮಣ್ಣ**
**ಸಂಶೋಧನಾ ಸಹಾಯಕರು, ಕಸಂವಿ, ಬೆಂಗಳೂರು**




ಸಂಸ್ಕೃತ ಅಧ್ಯಯನ ಕಡ್ಡಾಯಕ್ಕೆ ತೊಡಕು: ಸಂಸ್ಕೃತ–ಭಾಷೆ ಅಧ್ಯಯನ ಕಡ್ಡಾಯವಾಗಬೇಕು. ಆದರೆ ಕೆಲವು ಸಮಸ್ಯೆಗಳು ಅಡ್ಡಿಯಾಗಿವೆ ಎಂದು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಪ್ರೊ. ವೇಣಿಮಾಧವ ಶಾಸ್ತ್ರೀ ಬೇಸರ ವ್ಯಕ್ತಪಡಿಸಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಥಾಪನ ದಿನಾಚರಣೆ ಹಾಗೂ ರಾಷ್ಟ್ರ ಮಟ್ಟದ ಸಂಸ್ಕೃತ ಸ್ಪರ್ಧೆಗಳಲ್ಲಿ ವಿಜಯ ವೈಜಯಂತಿ ಪ್ರಶಸ್ತಿ ಪುರಸ್ಕೃತ ವಿದ್ಯಾರ್ಥಿಗಳಿಗೆ ದಿನಾಂಕ 17.07.2018ರ ಮಂಗಳವಾರದಂದು ಅಭಿನಂಧಿಸಿ ಅವರು ಮಾತನಾಡಿದರು. ಸಂಸ್ಕೃತ ಭಾಷೆ ಕಲಿಕೆಗೆ ಇರುವ ಅಡೆತಡೆಗಳನ್ನು ಸುಲಭಗೊಳಿಸಿ ಸಂಸ್ಕೃತ ಸಂಪರ್ಕ ಭಾಷೆ ಆಗಬೇಕು ಎಂಬ ಧ್ಯೇಯದೊಂದಿಗೆ ಸಂಸ್ಕೃತ ಭಾಷೆ ಉಳಿಸಬೇಕಿದೆ, ಭಾಷೆ ಪ್ರಭಾವ ಬೀರುವ ಭಾಷೆಯಾಗಿದೆ ಎಂದರು. ಸಂಸ್ಕೃತ ಅಧ್ಯಯನದ



ಮೂಲ ವೇದ, ಉಪನಿಷತ್ತು ಪಠಣಗಳಾಗುತ್ತವೆ. ಇದರಿಂದ ಜೀವನ ಸಾರ್ಥಕಗೊಳಿಸಿಕೊಳ್ಳಬೇಕು. ಜೀವನಕ್ಕೆ ಮಾರ್ಗದರ್ಶನ ಹಾಗೂ ವಿದ್ಯೆ ನೀಡುವ ಖನಿಜ ಭಾಷೆ ಸಂಸ್ಕೃತ ಎಂದರೆ ತಪ್ಪಾಗಲಾರದು, ಭಾರತೀಯ ಸಂಸ್ಕೃತಿ ದೃಢವಾಗಿದ್ದು, ಅಳಿಸುವುದು ಕಷ್ಟ. ಹೀಗಾಗಿ, ಸಂಸ್ಕೃತಿ ಎಂದಿಗೂ ಜೀವಂತವಾಗಿರುತ್ತದೆ. 10 ಸಾವಿರ ವರ್ಷಗಳ ಹಿಂದೆಯೇ ವೈದಿಕ ಸಂಸ್ಕೃತಿ ರೂಢಿಯಲ್ಲಿತ್ತು ಎಂಬುವದನ್ನು ಹಿರಿಯರು ಅಧ್ಯಯನಗಳು ಹಾಗೂ ಸಂಶೋಧನೆಗಳನ್ನು ನಡೆಸುವ ಮೂಲಕ ಬಹಿರಂಗಪಡಿಸಿದ್ದಾರೆ ಎಂದು ಅಭಿಪ್ರಾಯ ಪಟ್ಟರು. ಇಂಗ್ಲೀಷ ಮೂಲಕ ಸಂಸ್ಕೃತ ಕಲಿಸಲು ಯತ್ನ: ಗುರು ಶಿಷ್ಯ ಪರಂಪರೆ ಸಂಸ್ಕೃತ ಹಾಗೂ ಸಂಸ್ಕೃತಿ ಉಳಿಸಲು ಪ್ರಮುಖವಾಗಿದೆ. ಭಾರತದಲ್ಲಿ ಬ್ರಿಟಿಷರು ಮೆಕಾಲೆ ಶಿಕ್ಷಣ ಹೇರಿದರೂ, ಸಂಸ್ಕೃತವನ್ನು ಇಂಗ್ಲೀಷ್ ಮೂಲಕ ಕಲಿಸಲು ಮುಂದಾದರು. ಇದು ಸಂಸ್ಕೃತ ಪ್ರತಿಬಿಂಬಿಸಲಿದೆ ಎಂದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪದ್ಮಾಶೇಖರ್ ಮಾತನಾಡಿ, ಸಾಂಸ್ಕೃತಿಕ ಶಕ್ತಿ ಕೇಂದ್ರವಾಗಿ ಸಂಸ್ಕೃತ ಭಾಷೆ ಇದೆ. ಶಾಸ್ತ್ರ ಪರಂಪರೆ ರಕ್ಷಣೆ ಹಾಗೂ ಅನ್ನ ಭಾಷೆಯ ಮೇಲೆ ಸಂಸ್ಕೃತ ಭಾಷೆ ಪರಿಣಾಮ ಬೀರಿದೆ. ದಕ್ಷಿಣ ಭಾರತಕ್ಕೂ ಸಂಸ್ಕೃತ ಭಾಷೆಗೂ ಅನನ್ಯ



ಸಂಬಂಧವಿದೆ. ಸಂಸ್ಕೃತ ಹಾಗೂ ಪ್ರಾಕೃತ ಭಾಷೆ ಇದ್ದಲ್ಲಿ ಪ್ರಾದೇಶಿಕ ಭಾಷೆ ಕನ್ನಡ ಇರಲೇಬೇಕು. ಈ ಮೂಲಕ ಎಲ್ಲಾ ರೀತಿಯಲ್ಲೂ ಅಧ್ಯಯನಕ್ಕೆ ಸಹಕಾರಿಯಾಗಲಿದೆ ಎಂದರು. ಸರ್ಕಾರ ಹಣಕಾಸು ಇಲಾಖೆಯ ಜಂಟಿ ಕಾರ್ಯದರ್ಶಿ ರಮೇಶ ಬಿ.ಎಲ್ ಮಾತನಾಡಿ. ಸಂಸ್ಕೃತ ಭಾಷೆಯ ಅಧ್ಯಯನ ನಿರಂತರವಾಗಿರಬೇಕು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಭಾಷಾ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಸರ್ಕಾರದಿಂದ ಅಗತ್ಯ ಸಹಕಾರಿ ನೀಡಲಾಗುವುದು ಎಂದರು.



ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವೆ ಎಂ.ಶಿಲ್ಪಾ ಹಾಗೂ ಹಣಕಾಸು ಅಧಿಕಾರಿ ಪಿ.ಆರ್. ಪಾಗೋಜಿ ಹಾಗೂ ವಿಶ್ವವಿದ್ಯಾಲಯದ ಎಲ್ಲ ಬೋಧಕ ಮತ್ತು ಬೋಧಕೇತರರು ಉಪಸ್ಥಿತರಿದ್ದರು.

# ಕೀರ್ತಿಶೇಷ ಶ್ರೀ ರಾಮಾಶಾಸ್ತ್ರೀ ನಾ. ಜೋಶಿ ಇವರ 103ನೇ ಜನ್ಮಶತಮಾನೋತ್ಸವ ನಿಮಿತ್ತ ರಾಜ್ಯಸ್ತರೀಯ ವಿದ್ವತ್ ಗೋಷ್ಠಿ

ವರದಿ: **ಡಾ. ಭಾಸ್ಕರ್ ಭಟ್ಟ ಜೋಶಿ**
**ಸಹಾಯಕ ಪ್ರಾಧ್ಯಾಪಕರು, ಕಸಂವಿ, ಬೆಂ-18**



ದಿ. 21.06.2018ರಿಂದ ದಿ. 23.06.2018 ರವರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ಶ್ರೀ ಗಜಾನನ ಸಂಸ್ಕೃತ ಪಾಠಶಾಲಾ, ಕಾಲೇಜು ಹಾಗೂ ಜ್ಯೋತಿಷ ಅಧ್ಯಯನ ಕೇಂದ್ರ ಸೂಡಿ,ಜಿ.ಗದಗ ಇಲ್ಲಿ ಮೂರು ದಿನಗಳ ಕಾಲ 'ರಾಜ್ಯಸ್ತರೀಯ ವಿದ್ವತ್ ಗೋಷ್ಠಿ' ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ವಿದ್ಯಾಭೂಷಣ, ಜ್ಯೋತಿಷ ಕೇಸರಿ ಖಗೋಳ ಸಾಮ್ರಾಟ, ಕೀರ್ತಿಶೇಷ ಶ್ರೀ ರಾಮಾಶಾಸ್ತ್ರೀ ನಾ. ಜೋಶಿಯವರ ಹೆಸರಿನಲ್ಲಿ "ಶ್ರೀ ರಾಮಾಶಾಸ್ತ್ರೀ ಪುರಸ್ಕಾರ" ಪ್ರಶಸ್ತಿಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳಾದ ವಿದ್ವಾನ್ ಪಿ.ಆರ್. ಪಾಗೋಜಿ ಅವರಿಗೆ ದಿ: 23.07.2018ರಂದು ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಜ್ಯೋತಿರ್ವಿದ್ವಾನ್ "ಶ್ರೀ ರಾಮಾಶಾಸ್ತ್ರೀ ಪುರಸ್ಕಾರ" ಪ್ರಶಸ್ತಿಯನ್ನು ಈವರೆಗೆ ಮೂರು ಜನಕ್ಕೆ ನೀಡಲಾಗಿದ್ದು, ಇವರು ನಾಲ್ಕನೇಯವರಾಗಿ ಭಾಜನರಾಗಿದ್ದಾರೆ, ಶ್ರೀಯುತರು ಬಾಲ್ಯದಿಂದಲೇ ಹಳ್ಳಿಯ ಸೊಗಡು,ಕಾಯಕ ನಿಷ್ಠೆಯನ್ನು ಮೈಗೂಡಿಸಿಕೊಂಡವರು. ಅಧ್ಯಯನದಲ್ಲಿ ಉತ್ತಮ ಆಸಕ್ತಿ ತೋರಿಸಿ ರಾಜ್ಯದ ನಾನಾ ಭಾಗಗಳಲ್ಲಿ ಸಂಚರಿಸಿ ದುಂಬಿ ಮಕರದ ಹೀರುವಂತೆ ಪ್ರಾಥಮಿಕದಿಂದ ಸ್ನಾತಕೋತ್ತರದವರೆಗೆ ಅಧ್ಯಯನ ನಡೆಸಿ,ಸರ್ವ ವೃತಿಗಳಲ್ಲಿ ಶ್ರೇಷ್ಠವಾದ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿ, ಅದರ ಜೋತೆಗೆ ಆಡಳಿತಾತ್ಮಕ ವಿಷಯಗಳ ಮೇಲೆ ನೈಪುಣ್ಯತೆಯನ್ನು ಸಾಧಿಸುತ್ತಾ ಹಂತ ಹಂತವಾಗಿ ಬೆಳೆದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪ ಕುಲಸಚಿವರಾಗಿ ಹಾಗೂ ಹಣಕಾಸು ಅಧಿಕಾರಿಯಾಗಿ ನೇಮಕಗೊಂಡು ದಕ್ಷವಾಗಿ ಆಡಳಿತ ನಡೆಸುತ್ತಿರುವದು ಪ್ರಶಂಸನಾರ್ಹ, ಸರ್ವ ವರ್ಗದ ಉದ್ಯೋಗಿಗಳ,



ವಿದ್ವಾಂಸರು ಹಾಗೂ ಜನ ಸಾಮಾನ್ಯರ ಜೊತೆ ಇವರ ಒಡನಾಟ ಉನ್ನತ ಹುದ್ದೆಗೆ ಕಂಕಣವಿಟ್ಟಂತಿದೆ. ಸಂಸ್ಕೃತಕ್ಕಾಗಿ ಇಷ್ಟು ವರ್ಷ ಇವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ "ಶ್ರೀ ರಾಮಾಶಾಸ್ತ್ರೀ ಪುರಸ್ಕಾರ" ನೀಡಿ ಗೌರವಿಸಲಾಯಿತು.

# ವಿಶ್ವವಿದ್ಯಾಲಯದಲ್ಲಿ ಸದ್ಭಾವನಾ ದಿನಾಚರಣೆ'

ವರದಿ: **ಡಾ. ಉದಯನ ಹೆಗಡೆ**
ಸಂಶೋಧನಾ ಸಹಾಯಕರು, ಕಸಂವಿ, ಬೆಂಗಳೂರು-18



ಮಾಜಿ ಪ್ರಧಾನ ಮಂತ್ರಿ ದಿವಗಂತ ರಾಜೀವ ಗಾಂಧಿಯವರ ಜನ್ಮದಿನಾಚರಣೆ (ದಿ.20.08.2018)ಯನ್ನು ಕೇಂದ್ರ ಸರಕಾರದ ಸುತ್ತೋಲೆಯ ನಿಮಿತ್ತ ಈ ದಿನವನ್ನು 'ಸದ್ಭಾವನಾ ದಿನ' ವನ್ನಾಗಿ ಆಚರಿಸಬೇಕೆಂಬ ಆದೇಶದ ಮೇರೆಗೆ ವಿಶ್ವವಿದ್ಯಾಲಯದ **ಮಾನ್ಯ ಕುಲಪತಿಗಳಾದ ಪ್ರೊ.ಪದ್ಮಾಶೇಖರ್** ಅವರು ಈ ಕೆಳಕಂಡಂತೆ ಪ್ರತಿಜ್ಞೆಯನ್ನು ಬೋಧಿಸಿದರು.

## ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆ

**"**ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಬೇಧ-ಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾಯಕ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ ವೈಯಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಬೇಧಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ



ನೀಡದೆ, ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇನೆಂದು ಸಹ ಪ್ರತಿಜ್ಞೆ ಮಾಡುತ್ತೇವೆ." ಈ ಪ್ರತಿಜ್ಞೆ ಬೋಧನೆಯಲ್ಲಿ ವಿಶ್ವವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿವರ್ಗದವರು ಹಾಜರಿದ್ದು, ಪ್ರತಿಜ್ಞೆಯನ್ನು ಮಾಡಿದರು.

# ಸಂಸ್ಕೃತೋತ್ಸವ ಸಮಾರಂಭ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ದಿನೋತ್ಸವ-2018

ವರದಿ: **ಶ್ರೀ ವಿದ್ವಾನ್ ಶ್ರೀ ರೇಣುಕಾರಾಧ್ಯ, ಪ್ರಾಚಾರ್ಯರು**
**ಸಂಸ್ಕೃತ ಕಾಲೇಜು, ಬೆಕ್ಕಿನಕಲ್ಮಠ, ಶಿವಮೊಗ್ಗ**



ದಿ.25.08.2018 ರ ಶನಿವಾರ ಬೆಳಗ್ಗೆ 11.00 ಗಂಟೆಗೆ ಶ್ರೀ ಜಗದ್ಗುರು ಗುರುಬಸವೇಶ್ವರ ಪಾಠಶಾಲೆ, ಮುರುಘಾಮಠ, ಆನಂದಪುರಂ, ಸಾಗರ ತಾಲೂಕು ಶಿವಮೊಗ್ಗ ಜಿಲ್ಲೆ ಇಲ್ಲಿ ಸಂಸ್ಕೃತೋತ್ಸವ ಹಾಗೂ ಎನ್. ಎಸ್. ಎಸ್. ಘಟಕದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಸನ್ಮಾನ್ಯ ಶ್ರೀ ಹರ್ತಾಳ್ ಹಾಲಪ್ಪ ಶಾಸಕರು, ಮಾತನಾಡುತ್ತಾ ಸಂಸ್ಕೃತ ಭಾಷೆ, ಪುರಾಣ, ಇತಿಹಾಸಗಳ ಜ್ಞಾನದ ಗಣಿಯಾಗಿದೆ, ಇದರ ಅಧ್ಯಯನದಿಂದ ಜ್ಞಾನ ವಿಸ್ತಾರಗೊಳ್ಳುತ್ತದೆ ಎಂದರು. ಸಂಸ್ಕೃತ ಭಾಷೆಯು ಸಮೃದ್ಧವಾದ ಕಾವ್ಯಗಳನ್ನು ಒಳಗೊಂಡಿದೆ. ಪ್ರಾಚೀನ ಕಾಲದ ನಮ್ಮ ದೇಶದ ಜನಸಾಮಾನ್ಯರ ಆಡುಭಾಷೆಯಾಗಿದ್ದ ಇದು ಕ್ರಮೇಣ ಇತರ ಭಾಷೆಗಳ ಉದಯದಿಂದ ಕ್ಷೀಣಿಸುತ್ತಾಸಾಗಿದೆ. ಭಾರತದ ಇತರ ಭಾಷೆಗಳಿಗೆ ಸಂಸ್ಕೃತ ತಾಯಿ ಭಾಷೆಯಾಗಿದೆ. ಒಂದು ಕಾಲದಲ್ಲಿ ವಿದೇಶಿಯರನ್ನು ಆಕರ್ಷಿಸಿದ್ದ ಈ ಭಾಷೆ ತನ್ನದೇ ಆದ ವಿಶಿಷ್ಟ ಗೌರವ ಉಳಿಸಿಕೊಂಡು ಬಂದಿದೆ ಎಂದು ನುಡಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಡಾ. ಗಿರೀಶಚಂದ್ರ ರವರು ಮಾತನಾಡುತ್ತಾ ಸಂಸ್ಕೃತ ಶಿಕ್ಷಣವು ವಿಶ್ವವಿದ್ಯಾಲಯವು ಆದ ನಂತರ ನಮ್ಮಲ್ಲಿ ತುಂಬಾ ಬದಲಾವಣೆಗಳನ್ನು ಕಂಡಿದ್ದು,

ಸಂಸ್ಕೃತ ಶಿಕ್ಷಕರಿಗೆ ಎಲ್ಲ ಸೌಲಭ್ಯಗಳನ್ನು ಕೊಡುವುದರೊಂದಿಗೆ ಬಹಳ ವರ್ಷಗಳಿಂದ ನೆಲೆಗುದಿಗೆ ಬಿದಿದ್ದ ಪುಸ್ತಕಗಳನ್ನು ಹೊರತರಲಾಗಿದೆ ಹಾಗೂ ಸಂಸ್ಕೃತ ಶಿಕ್ಷಕರಿಗೆ ಕಾಲಕಾಲಕ್ಕೆ ತರಬೇತಿಗಳನ್ನು ಸಹ ನೀಡಲಾಗುತ್ತಿದ್ದು, ಉತ್ತಮ ವಾತಾವರಣ ಕಲ್ಪಿಸಲಾಗಿದೆ. ಅದೇ ರೀತಿ ನಮ್ಮ ವಿಶ್ವವಿದ್ಯಾಲಯುದ ಕುಲಪತಿಗಳು ಪ್ರೊ. ಪದ್ಮಾಶೇಖರ್‌ರವರು ನಮ್ಮ ನಿರ್ದೇಶನಾಲಯಗಳಿಗೆ ಉತ್ತಮ ಸೌಲಭ್ಯಗಳನ್ನು ನೀಡುವುದರ ಮೂಲಕ ನಮ್ಮ ಈ ಸಂಸ್ಕೃತ ಪಾಠಶಾಲೆಗಳ ಉನ್ನತಿಗೆ ಕಾರಣರಾಗಿದ್ದಾರೆಂದು ನುಡಿದರು ಸಂಸ್ಕೃತ ವಿಷಯ ಪರಿವೀಕ್ಷಕರಾದ ಶ್ರೀ ಗಂಗಾಧರ್‌ರವರು ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಾ, ರಾಷ್ಟ್ರೀಯ ಸೇವಾ ಯೋಜನೆಯ ಪ್ರಥಮ ಸಂಯೋಜನಾಧಿಕಾರಿಗಳಾದ ಡಾ. ಸಂತೋಷ ಹಾನಗಲ್ಲ ಸರ್ ಅವರ ಮಾರ್ಗದರ್ಶನದಲ್ಲಿ ಇತರೆ ಶಾಲಾ–ಕಾಲೇಜುಗಳಂತೆ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ನಡೆಯುವ ಎಲ್ಲ ಕಾಲೇಜುಗಳಲ್ಲೂ ಎನ್.ಎಸ್.ಎಸ್. ಘಟಕಗಳನ್ನು ಪ್ರಾರಂಭಿಸಿ ಅದರ ಅಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿರುವುದು ಸಂತೋಷಕರವಾಗಿದೆ. ಶಿವಮೊಗ್ಗದಲ್ಲಿ ನಡೆಯುತ್ತಿರುವ ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಕಾಲೇಜುಗಳಲ್ಲಿಯೂ ಸಹ ಎನ್.ಎಸ್.ಎಸ್. ಘಟಕಗಳಿಂದ ಯೋಗ ಶಿಬಿರಗಳು ಹಾಗೂ ಗಿಡ ನೆಡುವ ಕಾರ್ಯಕ್ರಮಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ಕೂಡಿರುವುದು ಸಂತೋಷವಾಗಿದೆ ಎಂದು ನುಡಿದರು.

ದಿವ್ಯ ಸಾನಿಧ್ಯವನ್ನು ವಹಿಸಿದ್ದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಆಶೀರ್ವಚನವನ್ನು ನೀಡಿ "ಕಲಿಕೆಯ ಆರಂಭದಲ್ಲಿ ಕಠಿಣವೆನಿಸುವ ಸಂಸ್ಕೃತ ಭಾಷೆ ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ." ಸಂಸ್ಕೃತ ಭಾಷೆಯ ಅರಿವಿದ್ದರೆ ಉಳಿದ ಭಾಷೆಗಳ ಕಲಿಕೆ ಸುಲಭವಾಗುತ್ತದೆ. ಎಲ್ಲಾ ಭಾಷೆಗಳ ಮೂಲ ಸಂಸ್ಕೃತ. ಇಂತಹ ಸಂಸ್ಕೃತ ಭಾಷೆಯನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ನುಡಿದರು. ಈ ನಮ್ಮ ಸಂಸ್ಥೆಯಲ್ಲೂ ಸಹ ಸಂಸ್ಕೃತ ಪಾಠಶಾಲೆಗಳನ್ನು 1980 ರಿಂದಲೇ ಪ್ರಾರಂಭ ಮಾಡಿದ್ದು, ಪ್ರಥಮ ಆದ್ಯತೆಯನ್ನು ನಾವು ಸಂಸ್ಕೃತಕ್ಕೆ ನೀಡಿರುತ್ತೇವೆ. ಶಿವಮೊಗ್ಗದ ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಕಾಲೇಜಿನಲ್ಲಿಯೂ ಸಹ ಪ್ರತಿ ವರ್ಷ 50 ರಿಂದ 60 ವಿದ್ಯಾರ್ಥಿಗಳು ಅಭ್ಯಾಸವನ್ನು ಮಾಡುತ್ತಿದ್ದು, 2014–15ನೇ ಸಾಲಿನಿಂದ ರಾಷ್ಟ್ರೀಯ ಸೇವಾ ಯೋಜನೆಯ ಘಟಕವನ್ನು ಡಾ. ಸಂತೋಷ್ ಹಾನಗಲ್ ರವರು ಉದ್ಘಾಟಿಸಿ, ಅಂದಿನಿಂದ ಇಲ್ಲಿಯವರಗೆ ಯೋಗ ತರಬೇತಿ, ಸಂಸ್ಕೃತ ಸಂಭಾಷಣಾ ತರಬೇತಿ, ಪರಿಸರ ದಿನಾಚರಣೆಯ ಪ್ರಯುಕ್ತ ಪ್ರತಿ ವರ್ಷ ನೂರಾರು ಗಿಡಗಳನ್ನು ನೆಡುವ ಮೂಲಕ ಎನ್.ಎಸ್.ಎಸ್ ಘಟಕವು ಉತ್ತಮ ರೀತಿಯಲ್ಲಿ ನಡೆಯುತ್ತಿರುವುದು ಸಂತೋಷಕರವಾಗಿದೆ ಎಂದು ನುಡಿದರು.

ಸಂಸ್ಕೃತ ಕಾಲೇಜಿನ ಪ್ರಾಚಾರ್ಯರು ಹಾಗೂ ಶಿವಮೊಗ್ಗ ಜಿಲ್ಲಾ ಸಂಸ್ಕೃತ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕಾರಾಧ್ಯ ಇವರು ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ವಲಯ ಸಂಯೋಜಕರಾದ ಶ್ರೀ ವಿದ್ವಾನ್ ಗಿರೀಶರವರು ಉಪಸ್ಥಿತರಿದ್ದರು. ಸಂಸ್ಕೃತ ಪಾಠಶಾಲೆ, ಮುಖ್ಯಶಿಕ್ಷಕರಾದ ಶ್ರೀ ಶಾಂತವೀರಯ್ಯನವರು ಸ್ವಾಗತಿಸಿದರು. ಸಾಗರದ ಸಂಸ್ಕೃತ ಪಾಠಶಾಲೆ ಶಿಕ್ಷಕರಾದ ಗಜಾನನ ಭಟ್ ಇವರು ನಿರೂಪಿಸಿದರು. ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಈ ಮೂರು ಜಿಲ್ಲೆಗಳಿಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಸಂಸ್ಕೃತ ರೂಪಕ, ನೃತ್ಯ, ಗೀತ ಗಾಯನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

# ವಿಶ್ವವಿದ್ಯಾಲಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯ ನಾಯಕತ್ವ ಶಿಬಿರ 2017-18

ವರದಿ: **ವಿದೂಷಿ ಎಂ.ವಿ.ಸಾವಿತ್ರಿ**, ಸಂಶೋಧಕೀ
ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ



ಸಂಸ್ಕೃತ ಸಂಶೋಧನ ಸಂಸತ್ ಹಾಗೂ ಕರ್ನಾಟಕ ಸಂಸ್ಕತ ವಿಶ್ವವಿದ್ಯಾಲಯ ಉಭಯ್ ಸಹಕಾರದೊಂದಿಗೆ 09.03.2018ರಿಂದ 15.03.2018ರವರೆಗೆ ನಡೆದ ಶಿಬಿರದ ಉದ್ಘಾಟನಾ ಸಮಾರಂಭವು ಮೇಲುಕೋಟೆ ಕ್ಷೇತ್ರದಲ್ಲಿರುವ ಸಂಸ್ಕೃತ–ಸಂಶೋಧನ–ಸಂಸತ್ ಆಶ್ರಯದಲ್ಲಿ ನಡೆದಿದೆ. ಸಂಸ್ಥೆಯ ವಿದ್ವಾಂಸರುಗಳಿಂದ ಮೊದಲಿಗೆ ವೇದಘೋಷ, ಕುಮಾರಿ ವಾಸುಕೀ ಜಿ. ಹಾಗೂ ಶ್ರೀಯುತ ಜವರೆಗೌಡರಿಂದ ನಾಡಗೀತೆ ಕಾರ್ಯಕ್ರಮ, ನಂತರ ಶ್ರೀಮತಿ ದಿವ್ಯಾಕಿರಣ ಮತ್ತು ಅವರ ಸಂಗಡಿಗರಿಂದ ರಾಷ್ಟ್ರೀಯ ಸೇವಾ ಯೋಜನೆಯ ಗೀತೆಯು ಹಾಡಲ್ಪಟ್ಟಿತ್ತು. ನಂತರ ಸಂಸ್ಕೃತ ಸಂಶೋಧನ ಸಂಸತ್ತಿನ ಕುಲಸಚಿವರಾದ ವಿದ್ವಾನ್ ಎಸ್. ಕುಮಾರ್‌ರವರು ಸ್ವಾಗತ ಭಾಷಣ ಮಾಡಿದರು. ಡಾ.ಸಂತೋಷ ಎಸ್.ಹಾನಗಲ್ಲ ಉಪನಿರ್ದೇಶಕರು, ಕರ್ನಾಟಕ ಸಂಸ್ಕತ ವಿಶ್ವವಿದ್ಯಾಲಯ ಇವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಎನ್.ಎಸ್.ಎಸ್. ಶಿಬಿರವು ಹೇಗೆ ಎಲ್ಲಿ ನಡೆಯಬೇಕು? ಎಂದುದಾಗಿ ಮಾನ್ಯ ಕುಲಪತಿಗಳಾದ ಶ್ರೀಮತಿ ಪದ್ಮಾಶೇಖರ್ ಅವರೊಂದಿಗೆ ಚರ್ಚಿಸಲಾಗಿ ಅವರು ಮೇಲುಕೋಟೆಯೇ ಸರಿಯಾದ ಸ್ಥಳವೆಂದು

ಹೇಳಿದರು. ಅದರಂತೆಯೇ ಇಲ್ಲಿಯೆ ನಡೆಸಲು ತೀರ್ಮಾನಿಸಿದೆವು. ಈ ಜಾಗವು ಪ್ರಶಾಂತವಾಗಿದೆ ಹಾಗೂ ಪರಿಸರವು ಅಷ್ಟೇ ಶಾಂತವಾಗಿದೆ ಎಂದು ತಿಳಿಸಿದರು. ಅಧ್ಯಕ್ಷರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿಗಳಾದ ಶ್ರೀಮತಿ ಪದ್ಮಾಶೇಖರ್ ರವರು ಮಾತನಾಡಿ ಇದು ಶ್ರೀರಾಮಾನುಜರ ಕ್ಷೇತ್ರ. ಇಲ್ಲಿ ಅವರ ಸಹಸ್ರಮಾನೋತ್ಸವದ ಕಾರ್ಯಕ್ರಮವು ನಡೆಯುತ್ತಿದೆ. ಅವರು ಶಿಬಿರಾರ್ಥಿಗಳಿಗೆ ಸಾಕಷ್ಟು ವಿಚಾರ ಹಾಗೂ ಮಾಹಿತಿಗಳನ್ನು ನೀಡಿದರು. ಉದ್ಘಾಟನಾ ಭಾಷಣದಲ್ಲಿ ಶ್ರೀ ವೈ.ಎನ್. ಉಪ್ಪಿನ್ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಹಿತವಚನಗಳನ್ನು ನೀಡಿದರು. ಶಿಬಿರಕ್ಕಾಗಿ ಟೀಶರ್ಟ್ ನೀಡಿರುವ ದಾನಿಗಳಾದ ಜಾನಕೀರಾಮ್ ಹಾಗೂ ಶ್ರೀಮತಿ ಇಂದಿರಮ್ಮ ಅವರುಗಳನ್ನು ಸನ್ಮಾನಿಸಲಾಯಿತು ಹಾಗೂ ವಿದ್ವಾನ್ ಎಸ್. ಕುಮಾರ ಕುಲಸಚಿವರು, ಸಂಸ್ಕೃತ ಸಂಶೋಧನ ಸಂಸತ್ ಇವರಿಗೆ ರಾಜಮರ್ಯಾದಾ ಮೇರುಗಿರಿ ಪ್ರಶಸ್ತಿ




ಲಭಿಸಿದ್ದಕ್ಕಾಗಿ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಪೂಜ್ಯಶ್ರೀಗಳಾದ ಜೀಯರ್ ಅವರು ಆಶೀರ್ವಚನ ನೀಡಿ ಮೇಲುಕೋಟೆಯಲ್ಲಿಯೇ ವಿಶಿಷ್ಟಾದ್ವೈತಕ್ಕೆ ಸಂಬಂಧಿಸಿದ ಸಂಸ್ಥೆ ಏಕೆ ಸ್ಥಾಪನೆಯಾಗಬೇಕು? ಕಾರಣ ಶ್ರೀರಾಮಾನುಜರು ಇಲ್ಲಿ 14 ವರ್ಷಗಳ ಕಾಲ ಇಲ್ಲಿ ನೆಲೆಸಿ ಶ್ರೀಭಾಷ್ಯವನ್ನು ಉಪದೇಶಿಸಿರುವರು. ಸಂಸ್ಕೃತಜ್ಞರೂ ಸಹ ಸ್ವಚ್ಛತಾ ಕಾರ್ಯಕ್ರಮ ಮಾಡಬಹುದು ಎಂಬುದುನ್ನು ತಿಳಿಸಿದರು. ಈ ಸ್ವಯಂಸೇವೆಯು 1969ರಲ್ಲಿ ಪ್ರಾರಂಭವಾಯಿತು ಎಂದು ತಿಳಿಸಿದರು. ಗುರುಶಿಷ್ಯರ ಸಂಬಂಧವು ಹೇಗೆ ಇರಬೇಕು ಎಂಬುದಕ್ಕೆ ಉದಾಹರಣೆಯಾಗಿ ಶ್ರೀರಾಮಾನುಜರು ಹಾಗೂ ಕೂರೇಶರನ್ನು ಹೇಳಲಾಗಿದೆ. ಎಲ್ಲಾ ಪಂಗಡದವರೂ ಜಾತಿ–ಮತ ಭೇದವಿಲ್ಲದೆ ಒಂದೆಡೆ ಸೇರಿ ಕರ್ತವ್ಯವನ್ನು ನಿರ್ವಹಿಸಬೇಕೆಂಬುದು ಶ್ರೀರಾಮಾನುಜರು ಅಭಿಪ್ರಾಯವೆಂದು ತಿಳಿಸಿದರು. ಇದಾದ ನಂತರ ಶಾಂತಿಪಾಠವು ಸಂಸ್ಥೆಯ ವಿದ್ವಾಂಸರಿಂದ ನಡೆಯಿತು. ಈ ಕಾರ್ಯಕ್ರಮದ ನಿರೂಪಣೆಯನ್ನು ಸಂಸ್ಕೃತ ಸಂಶೋಧನ ಸಂಸತ್ತಿನ ವಿದುಷಿಯರಾದ ವಿ. ಶಶಿಕಲಾ ಹಾಗೂ ಎಂ.ವಿ.ಸಾವಿತ್ರಿಯವರು ನಡೆಸಿಕೊಟ್ಟರು.

ಶಿಬಿರಾರ್ಥಿಗಳನ್ನು 05 ಗುಂಪುಗಳನ್ನಾಗಿ ಮಾಡಿ ಆ ಗುಂಪುಗಳು ಇಂತಿವೆ. ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ವಿದ್ಯಾರಣ್ಯ ಹಾಗೂ ಬಸವಣ್ಣ. 10.03.2018 ಬಸವಣ್ಣ ತಂಡದವರು ಬೆಳಿಗ್ಗೆ 6–00 ಘಂಟೆಗೆ ಧ್ವಜಾರೋಹಣ ಮಾಡಲು ವಿದ್ವಾನ್ ಎಸ್.ಕುಮಾರ್ ಅವರನ್ನು ಪ್ರಾರ್ಥಿಸಿದರು. ಅವರು ಸಂತೋಷದಿಂದ ಈ ಕಾರ್ಯವನ್ನು ನೆರವೇರಿಸಿರುತ್ತಾರೆ. ಇವರು ಮಾತನಾಡುತ್ತಾ ಒಗ್ಗಟ್ಟಿನಲ್ಲಿ ಬಲವಿರಬೇಕು ಎಂಬುದರ ಸಾರವನ್ನು ಅಚ್ಚುಕಟ್ಟಾಗಿ ಶಿಬಿರಾರ್ಥಿಗಳಿಗೆ ತಿಳಿಸಿದರು. 10.03.2018ರಿಂದ 15.03.2018ರ ಪ್ರತಿನಿತ್ಯ ಬೆಳಿಗ್ಗೆ 6.30ರಿಂದ 8.00 ಘಂಟೆಯವರೆಗೆ ವಿದ್ವಾನ್ ಎಸ್.ಸಂಪತ್ಕುಮಾರನ್ ಅವರು ಯೋಗಾಸನದ ಬಗ್ಗೆ ತಿಳಿಸಿ ಕೆಲವೊಂದು ಆಸನಗಳನ್ನು ಹೇಳಿಕೊಟ್ಟಿರುತ್ತಾರೆ.



ಅಂದು ಶಂಕರಾಚಾರ್ಯ ಗುಂಪಿನವರು ಗ್ರಂಥಗಳನ್ನು ಸಾಗಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಉಳಿದ ಗುಂಪಿನವರು ಶಿಂಗ್ರೈಯ್ಯಂಗಾರ್ ಕೊಳ ಹಾಗೂ ಬಸವರಾಜ ಕೊಳವನ್ನು ಸ್ವಚ್ಛಗೊಳಿಸಿರುತ್ತಾರೆ. ಮಧ್ಯಾಹ್ನದ ಉಪನ್ಯಾಸ ಕಾರ್ಯಕ್ರಮದಲ್ಲಿ ಮೊದಲು ಸಂಸ್ಥೆಯ ವಿದ್ವಾಂಸರಾದ ವಿದ್ವಾನ್ ಎಂ. ಪಿ ಶೆಲ್ವತಿರುನಾರಾಯಣರವರು ಸಂಸ್ಕೃತ ಹಾಗೂ ಗಣಕಯಂತ್ರದ ಬಗ್ಗೆ ಉಪನ್ಯಾಸ ನೀಡಿದರು. ತಮ್ಮ ಉಪನ್ಯಾಸದಲ್ಲಿ 1990ರಲ್ಲಿ ಅಮರಕೋಶದ ಬಗ್ಗೆ ಒಂದು ಕಾರ್ಯಕ್ರಮ ರೂಪಿಸಲಾಯಿತು. ಅದರ ಒಂದು ಸಣ್ಣ ಪ್ರಯತ್ನವೇ ಇದು ಎಂದು ಹೇಳಿ ಅಮರಕೋಶದ ಪದಗಳನ್ನು ನೀಡಿದರೆ ಅದರ ಪರ್ಯಾಯ ಪದಗಳು ಅರ್ಥಗಳು ಎಲ್ಲವೂ ಸಂಸ್ಕೃತ, ಕನ್ನಡ, ಆಂಗ್ಲ, ಹಿಂದಿ, ಭಾಷೆಗಳಲ್ಲಿ ಬರುವಂತೆ ಉಪಯೋಗಿಸಲಾಗಿದೆ. ಕ್ರಿಯಾಪದ ನೀಡಿದಲ್ಲಿ ಅದರ ಧಾತು ಯಾವ ಗಣದಲ್ಲಿದೆ, ಅದರ ಪೂರ್ಣರೂಪಗಳನ್ನು ಅದರದೇ ಆದ ಲಕಾರಗಳಲ್ಲಿ ನೀಡಲಾಗಿದೆ ಎಂಬುದನ್ನು ತಿಳಿಸಿದರು. ಹಾಗೆಯೇ ಸಂಧಿಪ್ರಕರಣದಲ್ಲಿ ಸೂತ್ರದ ಅರ್ಥ, ಅದರ ಉದಾಹರಣೆಯನ್ನೂ ನೀಡಲಾಗಿದೆ. ಇದು ಕಲಿಯಲು ಸುಲಭ ಸೋಪಾನವಾಗಿದೆ. ಇದೇ ರೀತಿ ವೃತ್ತಗಳ ಬಗ್ಗೆ ತಿಳಿಸಿದರು. ಹಾಗೆಯೇ ತಾಳಪತ್ರಗಳನ್ನು ಗಣಕಯಂತ್ರಕ್ಕೆ ಅಳವಡಿಸಿಕೊಂಡಲ್ಲಿ ಅವುಗಳನ್ನು ಬರೆಯಲು ಹಾಗೂ ಕಲಿಸಲು ಹಾಗೂ ಕಲಿಯಲು ಸುಲಭ ಉಪಾಯಗಳನ್ನು ತಿಳಿಸಿದರು. ಅತ್ಯಂತ ಮುಖ್ಯವಾಗಿ ಶ್ರೀಭಾಷ್ಯದ ಒಂದು ಸೂತ್ರ. ಆ ಸೂತ್ರದಲ್ಲಿನ ಪೂರ್ವಪಕ್ಷ, ಸಿದ್ಧಾಂತಗಳನ್ನು ಗಣಕಯಂತ್ರದ ಮೂಲಕ ಸುಲಭವಾಗಿ ತಿಳಿಯಬಹುದೆಂದು ವಿವರಿಸಿದರು.

ಎರಡನೇ ಉಪನ್ಯಾಸಕಾರರಾದ ವಿದ್ವಾನ್ ಆರ್. ಕೆ. ನಾರಾಯಣ ಅಯ್ಯಂಗಾರ್‌ರವರು ಮಾತನಾಡುತ್ತಾ ವೇದಗಳು 10.000 ಬಿ.ಸಿ. ಯಲ್ಲಿಯೇ ಇತ್ತು ಎಂಬುದನ್ನು ಮ್ಯಾಕ್ಸ್ ಮುಲ್ಲರ್ ಮೊದಲಾದ ಮಹನೀಯರು ತಿಳಿಸಿರುವ ವಿಚಾರ ಹೇಳಿದರು. ವೇದಗಳು ನಿತ್ಯ, ಶಾಶ್ವತ, ಅಪೌರುಷೇಯ ಎಂಬುದು ಸತ್ಯ. ನಾವುಗಳು ಆಧ್ಯಾತ್ಮ ಸಂಪತ್ತನ್ನು ನೋಡುತ್ತಿದ್ದೇವೆ. ಅವುಗಳನ್ನು ತಿಳಿಯುವುದು ಬಹಳ ಕಷ್ಟ. ಉದಾ– ತೆಂಗಿನಕಾಯಿ, ಮೇಲಿನಸಿಪ್ಪೆ, ಚಿಪ್ಪು, ತಿರುಳು, ನೀರು ಇರುವುದು. ಇದರಲ್ಲಿ ನೀರನ್ನು ಪಡೆಯುವುದು ಅತ್ಯಂತ ಕಷ್ಟಕರ. ಅದರಂತೆಯೇ ನಿರಂತರವಾದ ಅಧ್ಯಾತ್ಮ ಚಿಂತೆಯನ್ನು ದೃಢವಾಗಿ ಮಾಡಿದಾಗ ಅದು ಸಾರ್ಥಕವಾಗುವುದು ಎಂಬುದನ್ನು ತಿಳಿಸಿದರು.

ಉಪನ್ಯಾಸ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದಂತಹ ಸಂಸ್ಥೆಯ ಕುಲಸಚಿವರು ಮಾತನಾಡಿ ವಿದ್ವಾನ್ ಆರ್. ಕೆ. ನಾರಾಯಣ ಅಯ್ಯಂಗಾರ್ ಅವರು ಹೇಳಿದ ಮಾತುಗಳನ್ನು ನಾವು ಮುಂದಿನ ದಿನಗಳಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಮಲ್ಲಿಕಾರ್ಜುನರವರು ನಡೆಸಿಕೊಟ್ಟರು. ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮವು ಅತ್ಯಂತ ಸುಂದರವಾಗಿ ಮೂಡಿಬಂದಿತು. ಹಾಗೂ ಟಿ.ಎಸ್.ವಿ.ಮೀಡಿಯಾ ಪ್ರೆಸೆಂಟೇಷನ್ ಇದರಲ್ಲಿ ಆಚಾರ್ಯರುಗಳ ಜೀವನಚರಿತ್ರೆ ತೋರಿಸ

ಲಾಯಿತು. ಅಂದು ಎಲ್ಲಾ ಶಿಬಿರಾರ್ಥಿಗಳು ಗ್ರಂಥಗಳನ್ನುಸಾಗಿಸುವಲ್ಲಿ ನಿರತರಾಗಿದ್ದರು.

## 11.03.2018 ಶಂಕರಾಚಾರ್ಯಗಣ

ಇಂದಿನ ಕಾರ್ಯಕ್ರಮದ ಧ್ವಜಾರೋಹಣವನ್ನು ಮೇಲುಕೋಟೆಯ ಗ್ರಾಮಪಂಚಾಯಿತಿಯ ಅಧ್ಯಕ್ಷರಾದ ವಿ.ಎಸ್. ನಾರಾಯಣಭಟ್ಟರ್‌ರವರು ನೆರವೇರಿಸಿದರು ಸಂಘೇ ಶಕ್ತಿಃ ಕಲೌ ಯುಗೇ ಎಂಬಂತೆ ಒಗ್ಗಟ್ಟಿದ್ದರೆ ಎಲ್ಲಾ ಕಾರ್ಯಗಳನ್ನೂ ನೆರವೇರಿಸಬಹುದು. ಸ್ವಚ್ಛತೆಯ ಬಗ್ಗೆ ಅರಿವು ಇನ್ನೂ ಮೂಡಿಲ್ಲ, ಮೂಡಬೇಕಾಗಿದೆ. ಮೇಲುಕೋಟೆಯಲ್ಲಿ ಕೊರತೆ ಇದ್ದಲ್ಲಿ ತಿಳಿಸಿದರೆ ಅದನ್ನು ಕೈಲಾದ ಮಟ್ಟದಲ್ಲಿ ಮಾಡಲು ಇಚ್ಛಿಸುತ್ತೇನೆ ಎಂದು ಹೇಳಿದರು.

ಅಧ್ಯಕ್ಷೀಯ ಭಾಷಣದಲ್ಲಿ ವಿದ್ವಾನ್ ಎಸ್. ಕುಮಾರರವರು ಮಾತನಾಡಿ ನಮ್ಮ ಕಲಿಕೆಯಲ್ಲಿ ಹಿಂದೆ ನಡೆದದ್ದನ್ನು ನೆನಪಿಸಿಕೊಳ್ಳಬೇಕು. ತಾಳ್ಮೆ ಎಂಬುದು ಮುಖ್ಯ ಎಂದು ತಿಳಿಸಿದರು. ಮಧ್ಯಾಹ್ನದ ಉಪನ್ಯಾಸ ಮಾಲಿಕೆಯಲ್ಲಿ ಸಂಸ್ಥೆಯ ವಿದ್ವಾಂಸರಾದ ವಿದ್ವಾನ್ ಎಸ್. ಎನ್.ಸಂಪತ್ಕುಮಾರನ್‌ರವರು ಪರಿಸರ ಮತ್ತು ಸ್ವಚ್ಛಭಾರತದ ಬಗ್ಗೆ ಮಾತನಾಡಿದರು. ಸ್ವಚ್ಛತೆ ಎಂದರೆ ನಮ್ಮ ಅಂತರಂಗದ ಮನಸ್ಸನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೆಕು. ಇವರು ಆ ವೇದ, ಉಪನಿಷತ್ತುಗಳು ಮುಂತಾದುವುಗಳನ್ನು ಹೇಳಿರುವುದನ್ನು ತಿಳಿಸಿದರು.

ಡಿ.ಡಿ.ಟಿ. ಸೇವನೆಯಿಂದ ಮನುಷ್ಯನ ಆಯುಷ್ಯವು 50ರಷ್ಟು ಕಡಿಮೆಯಾಗುವುದು. ಇರುವೆಯ ಸಂತಾನ ಎಂದು ಕೊನೆಯಾಗುವುದೋ ಅಂದು ಮಾನವನ ಜಾತಿನಾಶ ಎಂದು ಹಿರಿಯರು ಮಾತು. ಮೇಲುಕೋಟೆ ತೋಳಗಳ ವನ್ಯಧಾಮ, ಕೃಷ್ಣಮೃಗಳ ವನ್ಯಧಾಮ ಎಂಬುದಾಗಿ ಅಂತರಜಾ೯ಲದಲ್ಲಿ ತಿಳಿಸಲಾಗಿದೆ.

ವಿದ್ವಾನ್ ಕೆ.ಎನ್. ರಂಗಪ್ರಿಯ ಅವರು ಮಾತನಾಡಿದ ವಿಷಯ ಯುವಕರು ಮತ್ತು ಸಂಸ್ಕೃತ,ಸಂಸ್ಕೃತಕ್ಕೆ ದೇವನಾಗರೀ ಭಾಷೆಯೇ ಮುಖ್ಯ. ಪಾಣನಿಯ ವ್ಯಾಕರಣಶಾಸ್ತ್ರದಲ್ಲಿ ಉಚ್ಚಾರಣಾನುಚ್ಚಾರಣ ಸ್ಥಾನಗಳನ್ನು ತಿಳಿಸಿರುವರು. ಸಂಸ್ಕೃತ ಎಂಬುದು ಪರಿಪೂರ್ಣವಾದ ಭಾಷೆ ಎಂದು ಹೇಳಿದರು. ಇಲ್ಲಿ 937 ಪ್ರಭೇದದ ಮರಗಳಿದ್ದವು. ಈಗ ಕೇವಲ 36 ಪ್ರಭೇದಗಳ ಮರಗಳಿವೆ. ಅಧ್ಯಕ್ಷತೆ ವಹಿಸಿದ್ದ ವಿದ್ವಾನ್ ಎಸ್. ಕುಮಾರರವರು ಸಂಸ್ಕೃತ ಹಾಗೂ ಯುವಜನ ಇವು ಒಂದೇ ನ್ಯಾಣದ ಎರಡು ಮುಖಗಳು ಎಂದರು. ಭಾಷೆ, ಜ್ಞಾನ ಯಾರೊಬ್ಬರ ಸ್ವತ್ತೂ ಅಲ್ಲ ಎಂದು ಹೇಳಿದರು. ಶಂಕರ ತಂಡದವರಿಂದ ಸಾಯಂಕಾಲ ರಾಜೋಪಚಾರ ಸೇವಾ ಕಾರ್ಯವು ಅತ್ಯದ್ಭುತವಾಗಿ ಮೂಡಿ ಬಂದಿತು.

## 12.03.2018 ಮಧ್ವಾಚಾರ್ಯಗಣಃ

ಇಂದಿನ ಕಾರ್ಯಕ್ರಮದ ಊರಿನ ರಾಜ್ಯಪ್ರಶಸ್ತಿ ಪುರಸ್ಕೃತರು, ಶ್ರೀ ಕರಗಂ ನಾರಾಯಣ ಅಯ್ಯಂಗಾರ್ ಮೇಲುಕೋಟೆ ಇವರು ಧ್ವಜಾರೋಹಣ ನಡೆಸಿದರು.



ಇವರು ಮಾತನಾಡಿ ನಾನು 37 ವರ್ಷಗಳ ಕಾಲ ಶಿಕ್ಷಕನಾಗಿ ಸೇವೆ ಸಲ್ಲಿಸಿರುವೆನು. ಶ್ರೀ ರಾಮಾನುಜರು ಇಲ್ಲಿ ಬಹಳ ಕಾಲ ಇದ್ದುದರಿಂದ ಹಿರಿಮೆಯನ್ನು, ರಕ್ಷಣೆಯನ್ನು ಕೊಟ್ಟಂತಹ ಕ್ಷೇತ್ರ

ವಾಗಿದೆ. ಈ ಊರು ದೇವಾಲಾಶ್ರಯ ಗ್ರಾಮ. ಇಲ್ಲಿನ ದೇವಾಲಯದಲ್ಲಿ ಬಾವಿ ನೀರು, ಸೌದೆ ಒಲೆ ಹಾಗೂ ಹಿತ್ತಾಳೆ ಪಾತ್ರೆಗಳನ್ನು ಬಳಸಲಾಗುತ್ತಿದೆ. ಈ ಕ್ಷೇತ್ರದಲ್ಲಿ ರಾಮಾನುಜ ಪಂಥ ಇಂದೂ ಕೂಡ ಇದೆ ಎಂದು ತಿಳಿಸಿದರು. ಅಧ್ಯಕ್ಷತೆಯಲ್ಲಿ ಹಿರಿಯಲೆಕ್ಕಿಗರಾದ ಸಂಸ್ಥೆಯ ಪಿ.ಜಯತೀರ್ಥರವರು ಮಾತನಾಡಿ ಇಲ್ಲಿನ ಪದಾರ್ಥಗಳ ವಿಶೇಷತೆ ಹಾಗೂ ಧ್ವಜಾರೋಹಣ ಮಾಡಿದ ಶ್ರೀಯುತರ ಮನೆಗೆ ಯಾರೇ ಬಂದರೂ ಅವರಿಗೆ ಊಟ ಉಪಚಾರಗಳನ್ನು ನಿಸ್ವಾರ್ಥದಿಂದ ಮಾಡುತ್ತಿರು ವುದನ್ನು ಹೇಳಿದರು. ಅಂದಿನ ಶ್ರಮದಾನದಲ್ಲಿ ಎಲ್ಲಾ ತಂಡದವರೂ ಯೋಗನರಸಿಂಹ ಸ್ವಾಮಿಯ ಬೆಟ್ಟದ ಪರಿಸರವನ್ನು ಸ್ವಚ್ಛಗೊಳಿಸಿದರು.



ಮಧ್ಯಾಹ್ನದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಸ್ಥೆಯ ವಿದ್ವಾಂಸರಾದ ವಿದ್ವಾನ್.ಎಸ್.ಎನ್.ಆನಂದಾಳ್ವಾರ್ ಉಪನ್ಯಾಸದಲ್ಲಿ ಯುವಕರು ಹಾಗೂ ರಾಷ್ಟ್ರ ನಿರ್ಮಾಣದ ಬಗ್ಗೆ ಮಾತನಾಡಿ ನಾವು ಹಿರಿಯರನ್ನು ಯಾವಾಗಲೂ ಗೌರವಿಸಬೇಕು, ನಮ್ಮ ರಾಷ್ಟ್ರ, ದೇಶದ ಹೆಸರನ್ನು ಹೇಳಿದರು ಮೈ ರೋಮಾಂಚನ ಗೊಳ್ಳುವುದು. ಋಷಿ–ಮುನಿಗಳಿಂದ ಈ ರಾಷ್ಟ್ರ ನಿರ್ಮಾಣವಾಗಿದೆ. ಬೇರೆ ದೇಶಗಳಿಗಿಂತ ಭವ್ಯತೆಯು ನಮ್ಮ ಭಾರತಕ್ಕೆ ಇದೆ.

ನಮ್ಮ ಭಾರತವು ಏಕತೆಯಲ್ಲಿ ಐಕ್ಯತೆಯನ್ನು ಹೊಂದಿದೆ. ಹಿಂದೆ ಒಳ್ಳೆಯ ಪುರಾಣ, ಮಹಾಭಾರತದ ಕಥೆಗಳನ್ನು ಮಕ್ಕಳಿಗೆ ತಿಳಿಸಿ ಸತ್ಪ್ರಜೆಯನ್ನಾಗಿ ಮಾಡುತ್ತಿದ್ದರು. ಶ್ರೀಲಂಕಾದಲ್ಲಿ ಸೀತಾಮಾತೆ 14 ವರ್ಷ ವನವಾಸ ಮಾಡಿದ ಸ್ಥಳವನ್ನು ಗೌರವದಿಂದ ಪೂಜಿಸುವರು. ಯುವಕರಿಗೆ ಶಿಸ್ತು, ಸಹನೆ, ಅಧ್ಯಯನಶೀಲತೆ ಮುಖ್ಯ ಎಂಬುದಾಗಿ ತಿಳಿಸಿದರು.

ಸಾಯಂಕಾಲ ಕಾರ್ಯಕ್ರಮದಲ್ಲಿ ಶ್ರೀ ಜನಾರ್ಧನಶಾಸ್ತ್ರಿ ಅವರಿಂದ ನಡೆದ ಭರತನಾಟ್ಯ, ಮ್ಯಾಜಿಕ್ ಕಾರ್ಯಕ್ರಮವು ಪ್ರಮುಖ ಕೇಂದ್ರವಾಗಿತ್ತು.

**13.03.2018 ರಾಮಾನುಜ ತಂಡ**

ಇಂದಿನ ಧ್ವಜಾರೋಹಣ ಕಾರ್ಯಕ್ರಮವನ್ನು ಮಾಜಿ ಗ್ರಾಮಪಂಚಾಯಿತಿ ಸದಸ್ಯರಾದ ಶ್ರೀ ಗೋವಿಂದರವರು ನೇರವೇರಿಸಿ ಪ್ರಾಥಮಿಕ ಶಾಲೆಯಿಂದ ಉನ್ನತ ಶಿಕ್ಷಣದವರೆಗೂ ವಿದ್ಯಾಭ್ಯಾಸವನ್ನು ಮಾಡಿರುತ್ತಿರಿ ಇದರ ಸದುಪಯೋಗವನ್ನು ಸಮಾಜಕ್ಕೋಸ್ಕರ ಸದ್ವಿನಿಯೋಗ ಮಾಡಿರೆಂದು ತಿಳಿಸಿದರು.

ಇಂದು ವೇದಪುಷ್ಕರಣಿ, ಧನುಷ್ಕೋಟಿ ಹಾಗೂ ಟ್ರಕ್ಕಿಂಗ್‌ಗಾಗಿ ಶಿಬಿರಾರ್ಥಿಗಳು ಹೋಗಿದ್ದರು. ಸಾಯಂಕಾಲ ಸಾಂಸ್ಕೃತಿ ಕಾರ್ಯಕ್ರಮವನ್ನು ಯುವ ಸಾಹಿತಿಗಳಾದ ವಿದ್ವಾನ್ ಎಸ್.ಎನ್. ಸಿಂಹ ನಡೆಸಿಕೊಟ್ಟರು. ಅವರು ತಮ್ಮ ಭಾಷಣದಲ್ಲಿ ಸ್ವಚ್ಛತೆ ಹಾಗೂ ಪರಿಸರದ ಬಗ್ಗೆ ತಿಳಿಸಿ, ಉದಾಹರಣೆಯಾಗಿ ಐವಾನ್ ಎಂಬುವರ ಕಥೆಯನ್ನು ಹೇಳಿ



ವಿದ್ವಾನ್ ಎಸ್. ಕುಮಾರರವರು ಈ ತಾಳಪತ್ರದ ಬಗ್ಗೆ ಇನ್ನಷ್ಟು ಮಾಹಿತಿಗಳನ್ನು ನೀಡಿದರು.ವಿದ್ವಾನ್ ಜಿ.ಎಸ್.ಶ್ರೀನಾಥ್ ರವರು ಸಬಲೀಕರಣ ಮತ್ತು ಯುವಜನ ಇದರಲ್ಲಿ ದೇಹಬಲ- ಆತ್ಮ ಬಲ-ಮನೋಬಲಗಳನ್ನು ತಿಳಿಸಿದರು. ವಿದುಷಿ ಶ್ರೀಮತಿ ಎಂ.ವಿ.ಸಾವಿತ್ರಿಯವರು ಅಧ್ಯಕ್ಷತೆ ವಹಿಸಿದ್ದರು. ಸಾಯಂಕಾಲ ವಿದ್ಯಾರಣ್ಯ ತಂಡದವರಿಂದ ನೃತ್ಯ, ಜಾನಪದ ಗೀತೆ, ಭರತನಾಟ್ಯ ಇನ್ನು ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆಡೆದವು.

ಶ್ರಮದಿಂದ ಕೆಲಸ ಮಾಡಿದವರಿಗೆ ಊಟ ಮಾಡಲು ಅರ್ಹತೆ ಸೋಮಾರಿಗಳಿಗೆ ಇಲ್ಲ ಎಂಬ ವಿಚಾರ ತಿಳಿಸಿದರು. ಅಧ್ಯಕ್ಷತೆ ವಹಿಸಿದ ಪಿ.ಜಯತೀರ್ಥರವರು ಮಾತನಾಡಿ ಒಬ್ಬರ ಬಗ್ಗೆ ಇನ್ನೊಬ್ಬರು ಯಾವುದೇ ರೀತಿಯ ಮಾತುಗಳನ್ನು ಹೇಳದೆ ನಿರ್ಮಲ ಮನಸ್ಸಿನಿಂದ ಕಾರ್ಯ ಮಾಡಿದಲ್ಲಿ ಅದು ಸಾರ್ಥಕ ಎಂದು ಹೇಳಿದರು.

ಶಿಬಿರಾರ್ಥಿಗಳು ಕಲ್ಯಾಣಿ, ಅಕ್ಕತಂಗಿಯರ ಕೊಳ ಹಾಗೂ ಅದರ ಮೇಲಿನ ದಾರಿಗಳನ್ನು ಸ್ವಚ್ಛತೆಗೊಳಿಸಿರುತ್ತಾರೆ. ಸಂಸ್ಥೆಯ ಆವರಣದಲ್ಲಿ 300 ಗುಂಡಿಗಳನ್ನು ತೆಗೆದು ಸಸಿಗಳನ್ನು ನೆಡಲು ಅವಕಾಶ ಮಾಡಿ ಕೊಟ್ಟಿರುತ್ತಾರೆ.



**15.03.2018ರಂದು** ಶ್ರೀ ವೈ.ಎನ್. ರಾಮಸ್ವಾಮಿ ಅಯ್ಯಂಗಾರ್‌ರವರು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿ ತಮ್ಮ ಬಾಲ್ಯದಲ್ಲಿ ತಾವು ಕೂಡ ಈ ಒಂದು ಸೇವೆಯಲ್ಲಿ ತೊಡಗಿದ್ದೆ ಎಂಬ ವಿಷಯವನ್ನು ತಿಳಿಸಿ ಮಕ್ಕಳಿಗೆ ಪ್ರೋತ್ಸಾಹ ನೀಡುವ ಹಿತವಚನಗಳನ್ನು ನೀಡಿದರು. ಇಂದಿನ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಕುಲಸಚಿವರಾದ ವಿದ್ವಾನ್ ಎಸ್. ಕುಮಾರರವರು ಸಮಾರೋಪ ನಡೆಯುವು ದರಿಂದ ಅದರ ಬಗ್ಗೆ ಕೆಲವು ಹಿತನುಡಿಗಳನ್ನು ಹೇಳಿದರು.

ಮಧ್ಯಾಹ್ನದ ಉಪನ್ಯಾಸ ಕಾರ್ಯಕ್ರಮದ ವಿದ್ವಾನ್ ಎಸ್. ಕೃಷ್ಣನ್‌ರವರು ತಾಳಪತ್ರದ ಬಗ್ಗೆ ಸಾಕಷ್ಟು ವಿಚಾರವನ್ನು ಸವಿವರವಾಗಿ ಶಿಬಿರಾರ್ಥಿಗಳಿಗೆ ತಿಳಿಸಿದರು. ಇದೇ ಸಂದರ್ಭದಲ್ಲಿ ಕುಲಸಚಿವರಾದ

# ವಿಶ್ವವಿದ್ಯಾಲಯದ ಪ್ರಥಮ ಪಿಹೆಚ್.ಡಿ. (ವಿದ್ಯಾವಾರಿಧಿ) ಪದವಿ ಘೋಷಣೆ



ವರದಿ: **ವಿದ್ವಾನ್. ಗಿರೀಶ್ ಭಟ್**
**ಸಂಶೋಧನಾ ಸಹಾಯಕರು, ಕ.ಸಂ.ವಿ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2018 ನೇ ಶೈಕ್ಷಣಿಕ ವರ್ಷದಲ್ಲಿ ಇನ್ನೊಂದು ಮೈಲಿಗಲ್ಲನ್ನು ತಲುಪಿತು. ಈವರೆಗೆ ಸಂಸ್ಕೃತ ಕಾವ್ಯ, ಸಾಹಿತ್ಯ, ಪದವಿ (ಬಿ.ಎ.), ಸ್ನಾತಕೋತ್ತರ ಪದವಿ (ಎಂ.ಎ) ಮತ್ತು ಎಂ.ಫಿಲ್ ಪದವಿಗಳನ್ನು ನೀಡಿ ಸಂಸ್ಕೃತ ಕ್ಷೇತ್ರವನ್ನು ಸಂಪನ್ನಗೊಳಿಸುತ್ತಿರುವ ಸಂಸ್ಕೃತ ವಿಶ್ವವಿದ್ಯಾಲಯವು ಈ ವರ್ಷದಿಂದ ವಿದ್ಯಾವಾರಿಧಿ (ಪಿ.ಹೆಚ್.ಡಿ) ಪದವಿಗಳನ್ನೂ ನೀಡ ತೊಡಗಿದೆ. ಇದೇ ಆಗಸ್ಟ್ ತಿಂಗಳ 10ನೇ ತಾರೀಖಿನಂದು ವಿಶ್ವವಿದ್ಯಾಲಯದ ಎಲ್ಲ ಬೋಧಕ, ಬೋಧಕೇತರರು, ವಿದ್ವಾಂಸರು ಮೊದಲಾದವರು ಇದಕ್ಕೆ ಸಾಕ್ಷಿಯಾದರು. 2013ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಹೆಚ್.ಡಿ ಪಡೆಯಲು ಬಯಸುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ ವಿಶ್ವವಿದ್ಯಾಲಯದ ಮೊದಲ ಪಿಹೆಚ್.ಡಿಯ ಮೌಖಿಕ ಪರೀಕ್ಷೆ 10.8.2018 ರಂದು ಮಧ್ಯಾಹ್ನ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿ ಪ್ರೊ. ಶ್ರೀಮತಿ ಪದ್ಮಾಶೇಖರ್ ಅವರ ಸಮುಕ್ಷಮ ಜರುಗಿತು. ಸಂಸ್ಕೃತ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ.ವಿ. ಗಿರೀಶಚಂದ್ರ ಅವರ ಮಾರ್ಗದರ್ಶನದಲ್ಲಿ "ಗಜಶಾಸ್ತ್ರ ಗ್ರಂಥಾನಾಂ ತೌಲನಿಕಮಧ್ಯಯನಮ್" ಎಂಬ ವಿಷಯದ ಮೇಲೆ ಶೋಧ ಪ್ರಬಂಧವನ್ನು ಮಂಡಿಸಿದ್ದ ಸಂಶೋಧನಾಭ್ಯರ್ಥಿ ಶ್ರೀ.ಎಂ.ಸಿ. ನಾಗರಾಜ ಅವರ ಮೌಖಿಕ ಪರೀಕ್ಷೆಯನ್ನು ಪ್ರಬಂಧ ಪರಿಶೀಲಕರಲ್ಲಿ ಒಬ್ಬರಾಗಿದ್ದ ಡಾ.ಎಂ.ಎನ್. ಜೋಷಿ, [ನಿ.] ಸಂಸ್ಕೃತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಉಪಸ್ಥಿತಿಯಲ್ಲಿ ಮತ್ತು ಅನೇಕ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಹಾಜರಿಯಲ್ಲಿ ನಡೆಯಿತು.

ಗಜಶಾಸ್ತ್ರದ ವಿಚಾರವಾಗಿ ಅನೇಕ ಗ್ರಂಥಗಳು ಉಪಲಬ್ಧವಿದ್ದು ಅವುಗಳಲ್ಲಿ ಪಾಲಕಾಪ್ಯ ಗಜಶಾಸ್ತ್ರ (ತಂಜಾವೂರು), ವ್ಯಾಖ್ಯಾನ ಸಹಿತವಾದ ಪಾಲಕಾಪ್ಯ ಗಜಶಾಸ್ತ್ರ, ನೀಲಕಂಠನ ಮಾತಂಗಲೀಲಾ ಮತ್ತು ನಾರದ ವಿರಚಿತ ಉಮಾಪತ್ಯಾಚಾರ್ಯಟೀಕಾ ಸಹಿತವಾದ ಗಜಶಿಕ್ಷಾ ಎಂಬ ನಾಲ್ಕು ಗ್ರಂಥಗಳ ಅಧ್ಯಯನಕ್ಕೆ ಮಾತ್ರ ಸಂಶೋಧನಾರ್ಥಿಯು ತಮ್ಮ ಸಂಶೋಧನೆಯನ್ನು ಮಿತಗೊಳಿಸಿದ್ದಾರೆ. ಈ ಗ್ರಂಥಗಳ ತೌಲನಿಕ ಅಧ್ಯಯನವು ಪ್ರಬಂಧವಾಗಿ ರೂಪಿಸಲ್ಪಟ್ಟಿವೆ. ಈ ಗ್ರಂಥಗಳ ಜೊತೆಯಲ್ಲಿ ಸಂಸ್ಕೃತ ಕಾವ್ಯದ ಭಾಗವಾಗಿ ಕಾಳಿದಾಸನ ಎಲ್ಲ ಕಾವ್ಯಗಳು, ಕಿರಾತಾರ್ಜುನೀಯ, ಭಾಸನ ಪ್ರತಿಜ್ಞಾ ನಾಟಕ, ಶೂದ್ರಕನ ಮೃಚ್ಛಕಟಿಕ ಮೊದಲಾದ ಕಾವ್ಯ ವಿಧಗಳಿಂದಲೂ ಗಜದ ವಿಚಾರವಾಗಿನ ಅಂಶಗಳನ್ನು ಸಂಗ್ರಹಿಸಲಾಗಿದೆ ಈ ಮಹಾಪ್ರಬಂಧದಲ್ಲಿ. ಆನೆಗಳು, ಅವುಗಳ ವಿಧಗಳು, ಅವುಗಳನ್ನು ಹಿಡಿಯುವ ಕ್ರಮ, ಅವುಗಳು ಸಿಗುವ ದೇಶ–ಪ್ರದೇಶಗಳು, ಮಾವುತ, ಗಜಶಿಕ್ಷಣ, ಗಜಶಾಲೆ ಹೀಗೆ ಹತ್ತು ಹಲವು ವಿಷಯಗಳು ಬಗೆಗೆ ಮೇಲ್ಕಾಣಿಸಿದ ನಾಲ್ಕು ಗ್ರಂಥಗಳ ಆಮೂಲಾಗ್ರ ಅಂಶಗಳನ್ನು ಅಧ್ಯಯಿಸಿ ಪ್ರಬಂಧವನ್ನು ರಚಿಸಿದ್ದಾರೆ ಸಂಶೋಧನಾರ್ಥಿ. ಈ ಎಲ್ಲ ಅಂಶಗಳು ಇನ್ನೂ ಅನೇಕ ಗ್ರಂಥಗಳಲ್ಲಿ ಮಾತ್ರ ಇರುವುದು ಕಂಡುಬಂದಿದ್ದರೂ ಸಂಶೋಧನಾಭ್ಯರ್ಥಿಯು ನಾಲ್ಕು ಗ್ರಂಥಗಳ ತೌಲನಿಕ ಅಧ್ಯಯನವನ್ನು ಮಾತ್ರ ಮಾಡಿರುವುದರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ಸಂಶೋಧನ ಪ್ರಬಂಧಗಳನ್ನು ರಚಿಸುವಷ್ಟು ಅಗಾಧತೆ ಈ ವಿಷಯಕ್ಕಿದೆ ಎಂದು ಅಲ್ಲಿ ನೆರೆದಿದ್ದ ಕೆಲ ವಿದ್ವಾಂಸರು ಅಭಿಪ್ರಾಯಪಟ್ಟರು.

# ಸಿ.ಎಲ್.ವೈ. ಸಂಸ್ಕೃತ ಮಹಾವಿದ್ಯಾಲಯ ಧಾರವಾಡ ಇಲ್ಲಿ 2018-19ನೇ ಸಾಲಿನ ಸಂಸ್ಕೃತೋತ್ಸವ

ವರದಿ: **ವಿದ್ವಾನ್ ಸುಬ್ಬರಾಯ ಭಟ್ಟ**
ಪ್ರಾಧ್ಯಾಪಕರು, ಸಿ.ಎಲ್.ವೈ. ಸಂಸ್ಕೃತ ಮಹಾವಿದ್ಯಾಲಯ, ಧಾರವಾಡ



ದಿನಾಂಕ:26.07.2018 ರಂದು ಪರಿಸರ ಭವನ ಶ್ರೀನಗರ ಧಾರವಾಡ ಇಲ್ಲಿ 'ಸಂಸ್ಕೃತೋತ್ಸವವು' ಜರುಗಿತು. ಸಂಸ್ಕೃತೋತ್ಸವದ ಅಧ್ಯಕ್ಷತೆಯನ್ನು ಶ್ರೀ ಎನ್ ಎಚ್ ಕೋನರಡ್ಡಿ ಮಾಜಿ ಶಾಸಕರು ನವಲಗುಂದ ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಅಮೃತ ಎ ದೇಸಾಯಿ, ಶಾಸಕರು, ಧಾರವಾಡ ಗ್ರಾಮೀಣ ಇವರು ಆಗಮಿಸಿದ್ದರು. ಅತಿಥಿಗಳಾಗಿ ವಿದ್ವಾನ್ ಶ್ರೀ ಪಿ.ಆರ್.ಪಾಗೋಜಿ ಉಪಕುಲಸಚಿವರು ಕ.ಸಂವಿ. ಬೆಂಗಳೂರು ಇವರು ಆಗಮಿಸಿದ್ದರು ಹಾಗೂ ವಿಶೇಷ ಉಪನ್ಯಾಸಕರಾಗಿ ಶ್ರೀ ಜಿ.ಆರ್. ಭಟ್ಟ ನಿವೃತ್ತ ಪ್ರಾಚಾರ್ಯರು ಕೆ ಇ ಬೋರ್ಡ್ ಧಾರವಾಡ ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಎನ್ ಎಚ್ ಕೋನರಡ್ಡಿ ಇವರು ಮಾತನಾಡಿ ಇಂದಿನ ದಿನದಲ್ಲಿ ಸಂಸ್ಕೃತ ಭಾಷೆಯ ಅಧ್ಯಯನವನ್ನು ಅವಶ್ಯವಾಗಿದೆ, ಸಂಸ್ಕೃತ ಭಾಷೆ ಎಲ್ಲರ ಭಾಷೆ ಆದ ಕಾರಣ ಎಲ್ಲಾ ಶಿಕ್ಷಕರ ಅಧ್ಯಾಪಕರು ಸಂಸ್ಕೃತ ಭಾಷೆಯ ಅಧ್ಯಾಪನ ಮಾಡಬೇಕು, ಹೀಗೆ ಎಲ್ಲಾ ಶಿಕ್ಷಕ ವೃಂದದವರಿಗೆ ಕರೆ ನೀಡಿದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾನ್ಯ ಶ್ರೀ ಅಮೃತ ಎ. ದೇಸಾಯಿ ಇವರು ಸಂಸ್ಕೃತವು ದೇವಭಾಷೆ ಸಂಸ್ಕೃತವನ್ನು ಎಲ್ಲರೂ ಅಧ್ಯಯನ ಮಾಡಬೇಕು, ಈಗ ಎಲ್ಲೆಡೆಯೂ ಸಂಸ್ಕೃತಕ್ಕೆ ಒಳ್ಳೆಯ ಪ್ರೋತ್ಸಾಹ ಹಾಗೂ ಸಂಸ್ಕೃತ ಕಲಿಸಲು ಒಳ್ಳೆಯ ವಾತವರಣವಿದೆ, ಆದ್ದರಿಂದ ಎಲ್ಲರೂ ಸಂಸ್ಕೃತಗೋಸ್ಕರ ಶ್ರಮಿಸಬೇಕು ಎಂದರು.

ಕಾರ್ಯಕ್ರಮದ ಅತಿಥಿಗಳಾದ ವಿದ್ವಾನ್ ಶ್ರೀ ಪಿ.ಆರ್.ಪಾಗೋಜಿ ಇವರು ಮಾತನಾಡುತ್ತಾ, ಇಂದು ಸಂಸ್ಕೃತ ಭಾಷೆಯು ಇಲ್ಲಾ ದೇಶಗಳಲ್ಲಿಯೂ ಪ್ರಸಾರವಾಗುತ್ತಿದೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ಭಾಷೆಯ ಬಗ್ಗೆ ಒಳ್ಳೆಯ ಆಸಕ್ತಿಯನ್ನು ತಳೆಯಲು ಶ್ರಮಿಸುತ್ತಿದೆ. ಸಂಸ್ಕೃತ ಭಾಷೆಯಲ್ಲಿ ಅಗಾಧವಾದ ಜ್ಞಾನ ಇದೆ. ಸಂಸ್ಕೃತವು ಅತ್ಯಂತ ಪ್ರಾಚೀನ ಭಾಷೆ, ಅಲ್ಲದೇ ಈಗಲೂ ಸಂಸ್ಕೃತ ಭಾಷೆಗೆ ಒಳ್ಳೆಯ ಸ್ಥಾನ ಇದೆ. ಅಲ್ಲದೇ ಶ್ರೀ ರವೀಂದ್ರನಾಥ ಟ್ಯಾಗೋರ ಶ್ರೀ ನಾರಾಯಣ ಗುರು ಮೊದಲಾದವಾರು ಸಂಸ್ಕೃತ ಭಾಷೆಯು ಉನ್ನತಿಗೋಸ್ಕರ ಬಹಳವಾಗಿ ಶ್ರಮಿಸಿರುತ್ತಾರೆ, ಸಂಸ್ಕೃತವು ಪ್ರಾಚೀನ ಭಾಷೆ, ಈ ಭಾಷೆಯು ಎಲ್ಲ ಭಾಷೆಗಳ ಜನನಿ, ಈ ಭಾಷೆಯ ಉನ್ನತಿಗೋಸ್ಕರ ಹಾಗೂ ಪ್ರಚಾರ, ಪ್ರಸಾರ ಮಾಡಲು ಇವರು ನೀಡಿದ ಯೋಗದಾನವು ಮಹತ್ವ ಪೂರ್ಣವಾಗಿದೆ. ಹಾಗೆಯೇ ಸಂಸ್ಕೃತ ಭಾಷೆಯು ಸರಳ ಸುಂದರ ಭಾಷೆಯಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈ ನಿಟ್ಟಿನಲ್ಲಿ ಸಂಸ್ಕೃತಗೋಸ್ಕರ ಒಳ್ಳೆಯದಾದ ಕಾರ್ಯವನ್ನು ಮಾಡುತ್ತಿದೆ. ಆದ್ದರಿಂದ ಸಂಸ್ಕೃತವು ಮುಂದೆಯೂ ಒಳ್ಳೆಯ ಭವಿಷ್ಯವನ್ನು ಹೊಂದಲು ಸಾಧ್ಯ ಎಂದು ತಿಳಿಸಿದರು. ಇತರ ದೇಶಗಳಲ್ಲಿ ಸಂಸ್ಕೃತ ಭಾಷೆಯ ವಿಷಯಗಳನ್ನು ಬೇರೆ ಭಾಷೆಗಳಲ್ಲಿ ತರ್ಜುಮೆ ಮಾಡಿ ಸಂಸ್ಕೃತ ಸಂಸ್ಕೃತ ಭಾಷೆಯ ಪ್ರಚಾರಕ್ಕೆ ಒಳ್ಳೆಯ ಕಾರ್ಯ ಮಾಡಿರುತ್ತಾರೆ ಎಂದು ನುಡಿದರು.





ನಂತರ ಕಾರ್ಯಕ್ರಮದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಂಸ್ಕೃತ ಸ್ತೋತ್ರ ಪಠಣ, ಭಾಷಣ ಹಾಗೂ ಸುಭಾಷಿತಗಳನ್ನು ವಿದ್ಯಾರ್ಥಿಗಳು ಹೇಳಿದರು. ಹಾಗೂ ಸಿ.ಎಲ್.ವೈ, ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾದ ನಾಸಾಭರಣಮ್ ಎಂಬ ನಾಟಕವನ್ನು ಪ್ರದರ್ಶನ ಮಾಡಿದರು. ಈ ನಾಟಕದ ನಿರ್ದೇಶನವನ್ನು ಕಾಲೇಜಿನ ಪ್ರಾಧ್ಯಾಪಕರಾದ ವಿದ್ವಾನ್ ಈಶ್ವರ ಭಟ್ಟ ಇವರು ಮಾಡಿರುತ್ತಾರೆ. ಹಾಗೂ ಕಾರ್ಯಕ್ರಮದಲ್ಲಿ ಗುರುಕುಲ ಶಿಕ್ಷಣ ಟ್ರಸ್ಟ್ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಹಾಗೂ ಕೆ.ಎಂ.ಎಫ್. ಹಾಲು ಒಕ್ಕೂಟ ಸಂಘದ ಅಧ್ಯಕ್ಷರಾದ ಶ್ರೀಯುತ ಶಂಕರ ಮುಗದ ಇವರು ಹಾಜರಿದ್ದರು. ಈ ಕಾರ್ಯಕ್ರಮವು ಕಾಲೇಜಿನ ವಿದ್ಯಾರ್ಥಿಗಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ವಿದ್ವಾನ್ ಸೂರ್ಯನಾರಾಯಣ ಭಟ್ಟ ಇವರು ನೆರವೇರಿಸಿದರು ಹಾಗೂ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಶ್ರೀಧರಶಾಸ್ತ್ರಿ ಎನ್ ಇನಾಮದಾರ ಇವರು ಸ್ವಾಗತಿಸಿದರು. ಸದರ ಕಾರ್ಯಕ್ರಮವು ವಂದನಾರ್ಪಣೆ ಹಾಗೂ ಐಕ್ಯ ಮಂತ್ರದೊಂದಿಗೆ ಮುಕ್ತಾಯವಾಯಿತು.

# ಶ್ರೀ ಸಿದ್ಧಲಿಂಗೇಶ್ವರ ವೇದ-ಸಂಸ್ಕೃತ ಕಾಲೇಜಿನ ಸಂಸ್ಕೃತ ಸಪ್ತಾಹ ಸಮಾರಂಭ

✵ ವರದಿ: **ವಿದ್ವಾನ್ ಜಿ.ಸಿ.ರಾಜಶೇಖರಯ್ಯ**
ಪ್ರಾಚಾರ್ಯರು




ದಿ:23.08.2018ರಂದು ಮಧ್ಯಾಹ್ನ 03 ಗಂಟೆಗೆ ಶ್ರೀ ಸಿದ್ಧಲಿಂಗೇಶ್ವರ ವೇದ–ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವು ವೇದಘೋಷದೊಂದಿಗೆ ಆರಂಭವಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಸಿದ್ಧಲಿಂಗೇಶ್ವರ ಪ್ರೌಢಶಾಲೆಯ ಮುಖ್ಯಶಿಕ್ಷಕರಾದ ವಿದ್ವಾನ್ ಸಿ.ರೇವಣಸಿದ್ದಯ್ಯನವರು ಮಾತನಾಡುತ್ತಾ, ಎಲ್ಲಾ ಭಾಷೆಗಳಿಗೂ ಸಂಸ್ಕೃತ ಮಾತೃಸ್ಥಾನೀಯವಾಗಿದೆ. ಸಂಸ್ಕೃತದ ಅನೇಕ ಶಬ್ದಗಳು ಕನ್ನಡ ಹಾಗೂ ಇತರೆ ಭಾಷೆಗಳಲ್ಲಿ ವ್ಯಾಪಕವಾಗಿರುವುದರಿಂದ ಆ ಭಾಷೆಗಳು ಮಹತ್ವವನ್ನು ಪಡೆದಿವೆ ಎಂದು ಹೇಳಿದರು. ಉಪನ್ಯಾಸವನ್ನು ನೀಡಿದ ನವೀನನ್ಯಾಯಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಎಸ್.ಎಸ್. ನಿರಂಜನಮೂರ್ತಿ ರವರು ಸರಳ ಸಂಸ್ಕೃತ ಸಂಭಾಷಣೆಯ ಮೂಲಕ ವಿದ್ಯಾರ್ಥಿಗಳು ತರಗತಿಗಳಲ್ಲಿ ಸಂಸ್ಕೃತ ಭಾಷಾ ವಾತಾವರಣವನ್ನು ನಿರ್ಮಿಸುವುದರ ಮೂಲಕ

ಶಾಸ್ತ್ರಾಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ ವಿದ್ವಾನ್ ಜಿ.ಸಿ. ರಾಜಶೇಖರಯ್ಯನವರು ಸಂಸ್ಕೃತ ಭಾಷೆಯು ಪ್ರಪಂಚದ ಧೀಮಂತ ಭಾಷೆಯಾಗಿದ್ದು, ಪಾಶ್ಚಿಮಾತ್ಯರು ಕೂಡ ಸಂಸ್ಕೃತಿಯ ಪ್ರತಿರೂಪವಾದ ಸಂಸ್ಕೃತಾಧ್ಯಯನಕ್ಕೆ ಹೆಚ್ಚು ಪ್ರೋತ್ಸಾಹವನ್ನು ನೀಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಂದನಾರ್ಪಣೆಯನ್ನು ಶ್ರೀ ಕೆ.ಎನ್.ವೀರಭದ್ರಯ್ಯನವರು, ನಿರೂಪಣೆಯನ್ನು ಶ್ರೀ ಹೆಚ್.ಎಸ್. ಪ್ರಶಾಂತ್‌ರವರು ನೆರವೇರಿಸಿದರು.

ದಿನಾಂಕ:29.08.2018ರಂದು ಸಮಯ 03 ಗಂಟೆಗೆ ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜಿನಲ್ಲಿ ಸಂಸ್ಕೃತ ಸಪ್ತಾಹ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯತಿಥಿಗಳಾಗಿ ಪ್ರಭಾರಿ ಪ್ರಾಂಶುಪಾಲರಾದ ಶ್ರೀ ಎಸ್.ಎಸ್. ನಿರಂಜನಮೂರ್ತಿರವರು ಮಾತನಾಡುತ್ತಾ, ಭಾಷಾಶುದ್ಧಿ ಕೇವಲ ಸಂಸ್ಕೃತದಿಂದ ಮಾತ್ರ ಸಾಧ್ಯ. ಸಂಸ್ಕೃತವನ್ನು ಬಲ್ಲವರು ಬೇರೆ ಬೇರೆ ಭಾಷೆಗಳನ್ನು ಕಲಿಯಲು ತುಂಬಾ ಸುಲಭವಾಗುತ್ತದೆ ಎಂದು ತಿಳಿಸಿದರು. ಉಪನ್ಯಾಸವನ್ನು ನೀಡಿದ ವ್ಯಾಕರಣಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಅಮರಗೋಪಾಲವರು ವ್ಯಾಕರಣಾದಿಗಳಿಂದ ಸಂಸ್ಕರಿಸಲ್ಪಟ್ಟ ಸಂಸ್ಕೃತ ಭಾಷೆ ಸಂಸ್ಕೃತಿಯ ಜೀವನಾಡಿ. ಸಂಸ್ಕೃತವು ಕೇವಲ ಒಂದು ಭಾಷೆಯಲ್ಲ! ಇದರಲ್ಲಿ ಕಲೆ, ಸಾಹಿತ್ಯ, ಕಾವ್ಯ, ಶಾಸ್ತ್ರ, ಪುರಾಣ, ನಾಟಕ, ಭಗವದ್ಗೀತೆ, ರಾಮಾಯಣ, ಮಹಾಭಾರತ, ಹಾಗೂ ನೀತಿಗ್ರಂಥಗಳಿಂದ ಕೂಡಿ, ದೊಡ್ಡ ಜ್ಞಾನನಿಧಿಯಾಗಿದೆ ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಕೆ. ಬಸವರಾಜುರವರು ಆಗಸ್ಟ್ 26ರಂದು ಶ್ರಾವಣಪೂರ್ಣಿಮೆಯ ಸಂಸ್ಕೃತ ದಿನ ಹಾಗೂ ರಕ್ಷಾಬಂಧನದ ನಿಮಿತ್ತ ಮನ್‌ಕೀಬಾತ್ ಕಾರ್ಯಕ್ರಮದಲ್ಲಿ ಬೆಂಗಳೂರಿನ ಚಿನ್ಮಯಿ ಎಂಬ ವಿದ್ಯಾರ್ಥಿನಿ ಸಂಸ್ಕೃತ ಭಾಷೆಯಲ್ಲಿ ಕೇಳಿದ ಪ್ರಶ್ನೆಗೆ ನಮ್ಮ ದೇಶದ ಪ್ರಧಾನಮಂತ್ರಿ ನರೇಂದ್ರಮೋದಿಯವರು ಕೂಡ ಸಂಸ್ಕೃತದಲ್ಲಿ ಉತ್ತರಿಸಿದರು. ಎಲ್ಲರಿಗೂ ಸಂಸ್ಕೃತ ದಿನದ ಶುಭಾಷಯ, ಪ್ರತಿಭಾಷೆಗೂ ತನ್ನದೇ ಆದ ಮಹತ್ತ್ವವಿದೆ ವೇದಗಳ ಕಾಲದಿಂದಲೂ ಜ್ಞಾನವನ್ನು ಬಿತ್ತರಿಸುತ್ತಿದೆ. ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ, ಕೃಷಿ, ಗಣಿತ, ವಾಸ್ತುಶಿಲ್ಪ, ಅರ್ಥಶಾಸ್ತ್ರಕ್ಕೆ ತನ್ನದೇ ಆದ ಕೊಡಗೆಯನ್ನು ನೀಡಿದೆ ಹಾಗೂ ಗುರುಶಿಷ್ಯರ ಪರಂಪರೆಯನ್ನು ಸಂಸ್ಕೃತ ತಿಳಿಸಿಕೊಟ್ಟಿದೆ ಎಂಬ ಮೋದಿಯವರ ಮಾತುಗಳನ್ನು ಉಲ್ಲೇಖಿಸುತ್ತಾ, ಅಂತಃಸತ್ತ್ವವುಳ್ಳ ಈ ಭಾಷೆಯು ಎಂತಹವರನ್ನೂ ಆಕರ್ಷಿಶಿಸುವ ಶಕ್ತಿ ಈ ಸಂಸ್ಕೃತ ಭಾಷೆಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಂದನಾರ್ಪಣೆಯನ್ನು ಶ್ರೀ ಹೆಚ್.ಆರ್. ನವೀನ್‌ಕುಮಾರ್‌ರವರು, ನಿರೂಪಣೆಯನ್ನು ಶ್ರೀ ಹೆಚ್.ಎಸ್. ಪ್ರಶಾಂತ್‌ರವರು ನೆರವೇರಿಸಿದರು. ಐಕ್ಯಮಂತ್ರದೊಂದಿಗೆ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಲಾಯಿತು.

# ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಸ್ನಾತಕ-ಸ್ನಾತಕೋತ್ತರ ಮಹಾವಿದ್ಯಾಲಯದಲ್ಲಿ ಸಂಸ್ಕೃತ ಸಪ್ತಾಹ

ವರದಿ: **ವಿದ್ವಾನ್ ಎಸ್. ದೇವರಾಜ**
ಅಧ್ಯಾಪಕರು, ಶ್ರೀ ರಾಘವೇಂದ್ರ ಭಾರತೀ ಸಂಸ್ಕೃತ ಕಾಲೇಜು
ಹೊನ್ನಾವರ



ದಿನಾಂಕ: 01.09.2018 ರಂದು ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜಿನ ಸಭಾ ಭವನದಲ್ಲಿ ಸಂಸ್ಕೃತ ಸಪ್ತಾಹ ಸಮಾರೋಹ ನಡೆಯಿತು. ಮುಖ್ಯಾಭ್ಯಾಗತರಾಗಿ ವಿದ್ವಾನ್ ವಿ.ಜಿ.ಹೆಗಡೆ ಗುಡ್ಗೆ ಅಧ್ಯಕ್ಷರು ಸಂಸ್ಕೃತ ಭಾರತೀ ಉತ್ತರಪ್ರಾಂತ ಇವರು ಮಾತನಾಡುತ್ತ, ಪ್ರಪಂಚದ 40 ದೇಶದಲ್ಲಿ ಸಂಸ್ಕೃತ–ಸಂಸ್ಕೃತಿ ರಕ್ಷಣೆಯಲ್ಲಿ ಎಲ್ಲರ ಹಿತ–ಶ್ರಮ ಅಡಗಿದೆ. ಹಾಗೆ ಇಂದಿನ ಕಂಪ್ಯೂಟರ ಯುಗದಲ್ಲಿ ಸಂಸ್ಕೃತ ಭಾಷೆಯ ಕೊಡುಗೆ ಅಪಾರವಾಗಿದೆ. ಸಂಸ್ಕೃತ ಭಾಷೆಯು ಅಭಿವೃದ್ದಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಪ್ರತಿ ಗ್ರಾಮೀಣ ಭಾಗದಲ್ಲಿ ಚಿಕ್ಕಮಕ್ಕಳಲ್ಲಿ ಭಾಷಾ ಸದಭಿರುಚಿ ಮೂಡುವ ಕೆಲಸ ನಾವೆಲ್ಲರೂ ಮಾಡಬೇಕೆಂದರು. ಅಭ್ಯಾಗತರಾಗಿ ಶ್ರೀಮತಿ ಲಲಿತಾ ಹೆಬ್ಬಾರ ಕುಮಟಾ ವಲಯ ಇವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಉತ್ತಮ ಸಂಸ್ಕಾರ ತುಂಬುವ ಕಾರ್ಯ ಸಂಸ್ಕೃತ ಶಾಲೆಗಳು ನಿರ್ವಹಿಸುತ್ತಿದೆ ಎಂದು ನುಡಿದರು. ಹಾಗೇನೆ ಹೊನ್ನಾವರ ಮಂಡಲದ ಅಧ್ಯಕ್ಷರಾದ ಶ್ರೀಮತಿ ಸಂಧ್ಯಾ ಭಟ್ಟ ಮಾತನಾಡಿ, ಸಂಸ್ಕೃತ ಭಾಷೆ ಎಷ್ಟು ಸುಸಂಸ್ಕೃತವಾದದ್ದು ಎಲ್ಲಾ ಭಾಷೆಗೂ ಮೂಲ ಸಂಸ್ಕೃತ ಎಂದು ತಿಳಿಸುತ್ತಾ ಇಂತಹ ಉತ್ತಮ ಪರಿಸರದಲ್ಲಿ ಸಂಸ್ಕೃತ ವಾತಾವರಣ ಪಸರಿಸುವ ಈ ಕಾರ್ಯಕ್ರಮಕ್ಕೆ ಬಂದ ನನಗೆ ತುಂಬಾ



ಸಂತೋಷವಾಯಿತು ಎಂದು ನುಡಿದರು. ಪ್ರಾಚಾರ್ಯರಾದ ವಿದ್ವಾನ್ ಗಣೇಶ ವಿಷ್ಣು ಭಟ್ಟ ಇವರು ಸಂಸ್ಕೃತದ ಮಹತ್ವದೊಂದಿಗೆ ಸಂಸ್ಕೃತದ ಹಿರಿಮೆಯನ್ನು ತಿಳಿಸಿದರು. ವಿದ್ಯಾರ್ಥಿ ಸುಬ್ರಹ್ಮಣ್ಯ ಎನ್. ಹೆಗಡೆ ವೇದಘೋಷದೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ಶ್ರೀಮತಿ ಶ್ರೀದೇವಿ ಹೆಗಡೆ ಸ್ವಾಗತಿಸಿದರು. ವಿದ್ವಾನ್ ಕೇಶವಕಿರಣ ಇವರು ನಿರೂಪಣೆ ಮಾಡಿದರು. ವಿದ್ವಾನ್ ಪತಂಜಲಿ ವೀಣಾಕರ ಇವರು ವಂದನಾರ್ಪಣೆಗೈದರು.

ದಿನಾಂಕ: 30.08.2018ರಂದು ಕುಮಟಾ ಹೆಗಡೆ ಗ್ರಾಮದಲ್ಲಿ ಸಂಸ್ಕೃತ ಸಪ್ತಾಹ ನಡೆಯಿತು. ವಿದೂಷಿ ಶ್ರೀಮತಿ ಶ್ರೀದೇವಿ ಪರಮೇಶ್ವರ ಹೆಗಡೆ ಇವರು ಮಾತನಾಡಿ ಸಂಸ್ಕೃತಿ-ಸಂಸ್ಕೃತ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಭಾರತೀಯ ಸಂಸ್ಕೃತಿಯ ಉಳಿವು ಸಂಸ್ಕೃತದಿಂದ ಸಾಧ್ಯ. ಮಾತೆಯರು ಸಂಸ್ಕೃತ ಕಲಿತರೆ ದೇಶವೆಲ್ಲ ಜಾಗೃತಗೊಂಡಿತು ಎಂದು ವಿವರಿಸುತ್ತಾ ಅರ್ಧ ಗಂಟೆಗಳ ಕಾಲ ಉಪನ್ಯಾಸ ನೀಡಿದರು.

ದಿನಾಂಕ:29.08.2019ರಂದು ಕರ್ಕಿಯಲ್ಲಿ ನಡೆದ ಸಂಸ್ಕೃತ-ಸಪ್ತಾಹದಲ್ಲಿ ಡಾ. ಮಂಜುನಾಥ ಇವರು ಜ್ಞಾನಚಿಂತನೆಯಲ್ಲಿ ಆಯುರ್ವೇದಿಕ್ ಉತ್ತಮ ಸಾಧನೆಯನ್ನು ತೋರಿದೆ. ವನೌಷಧಿಯ ಬಗ್ಗೆ ಉತ್ತಮ ಸಲಹೆ ನೀಡಿದರು. ವಿದ್ವಾನ್ ನಾರಾಯಣ ಭಟ್ಟ ಉಪನ್ಯಾಸ ನೀಡಿದರು.ಹೀಗೆ ಸಂಸ್ಕೃತ-ಸಪ್ತಾಹ ಅಂಗವಾಗಿ ತಾಲ್ಲೂಕಿನ ವಿವಿಧ ಸ್ಥಳಗಳಲ್ಲಿ ಉಪನ್ಯಾಸ ಹಮ್ಮಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು.

ದಿನಾಂಕ:31.08.2018ರಂದು ಹೊನ್ನಾವರದ ಸತ್ಯಸಾಯಿ ಸೇವಾಕ್ಷೇತ್ರದಲ್ಲಿ ಸಂಸ್ಕೃತ ಸಪ್ತಾಹ ನಡೆಯಿತು. ಕಾರ್ಯಕ್ರಮದಲ್ಲಿ ವಿದ್ವಾನ್ ಪತಂಜಲಿ ವೀಣಾಕರ ಇವರು ಉಪನ್ಯಾಸ ನೀಡುತ್ತಾ ಸಂಸ್ಕೃತವು ಜನರನ್ನು ಸುಸಂಸ್ಕೃತರನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರವಹಿಸುತ್ತದೆ ಮತ್ತು ಭಾರತೀಯ ಸಂಸ್ಕೃತಿ-ಸಂಸ್ಕೃತವನ್ನು ಆಶ್ರಯಿಸಿಕೊಂಡಿದೆ ಎಂದು ನುಡಿದರು.

# ಸಂಸ್ಕೃತ ಗ್ರಂಥ ಪುರಸ್ಕಾರ ಪ್ರದಾನ ಸಮಾರಂಭ

ವರದಿ: **ಶ್ರೀ ಬಿ.ಆರ್. ಸುರೇಶ**
**ಕಿರಿಯ ಸಹಾಯಕರು, ಕಸಂವಿ, ಬೆಂ-18**



ಪ್ರಾಚೀನ ಭಾಷೆಗಳಲ್ಲಿ ಒಂದಾದ ಸಂಸ್ಕೃತ ಸಾಹಿತ್ಯ ಪ್ರಪಂಚಕ್ಕೆ ಅಚ್ಚಳಿಯದ ಕೊಡುಗೆ ನೀಡಿದೆ. ಇಷ್ಟಾದರೂ ಸಂಸ್ಕೃತಕ್ಕೆ ಸಿಗಬೇಕಾದ ಮನ್ನಣೆ ಸಕ್ಕಿಲ್ಲ ಎಂದು ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ನಿರ್ದೇಶಕ ಡಾ.ಕೆ. ರಾಜೇಂದ್ರ ಬೇಸರ ವ್ಯಕ್ತಪಡಿಸಿದ್ದಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಎಂಟು ಸಂಸ್ಕೃತ ವಿದ್ವಾಂಸರಿಗೆ ಸಂಸ್ಕೃತ ಗ್ರಂಥ ಪುರಸ್ಕಾರ ಪ್ರದಾನ ಮಾಡಿ ಮಾತನಾಡಿದರು.

ಭಾರತೀಯ ಸಂಸ್ಕೃತಿಯ ಪ್ರತಿಬಿಂಬವಾದ ಸಂಸ್ಕೃತದಿಂದ ದೇಶದ ಬಹುತೇಕ ಭಾಷೆಗಳು ಶಬ್ದಗಳನ್ನು ಎರವಲು ಪಡೆದಿದೆ. ಕನ್ನಡದಲ್ಲಿ ಕೂಡ ಹಲವಾರು ಸಂಸ್ಕೃತ ಪದ ಪ್ರಯೋಗವನ್ನು ಹಾಗೆಯೇ ಉಳಿಸಿಕೊಂಡಿದ್ದೇವೆ. ಹೀಗಾಗಿ ಕನ್ನಡ ಸಾಹಿತ್ಯ ಸಂಸ್ಕೃತಕ್ಕೆ ಋಣಿಯಾಗಿದೆ. ಸಮೃದ್ಧ ಸಾಹಿತ್ಯ ಹೊಂದಿರುವ ಸಂಸ್ಕೃತಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕಿದೆ. ಜತಗೆ ವಿಶ್ವವಿದ್ಯಾಲಯ ನಡೆಸುವ ಸಂಶೋಧನೆ ಜನಸಾಮಾನ್ಯರನ್ನು ತಲುಪಬೇಕಿದೆ ಎಂದರು.

ಕಲಾವಿದರು ಸಂಗೀತಗಾರರು ಹಾಗೂ ಸಾಹಿತಿಗಳು ಸಮಾಜದ ಆಸ್ತಿಯಾಗಿದ್ದಾರೆ. ಸಂಸ್ಕೃತ ವಿವಿ ಅಧೀನದಲ್ಲಿ ವಿವಿಧ ಕಾಲೇಜು ಹಾಗೂ ಪಾಠಶಾಲೆಗಳು ಕಾರ್ಯನಿರ್ವಹಿಸುತ್ತಿವೆ.ಆದರೆ ಹಲವು ಜ್ಞಾನ ಕೇಂದ್ರದಲ್ಲಿ ಗ್ರಂಥಾಲಯವಿಲ್ಲ. ಹೀಗಾಗಿ ವಿಶ್ವವಿದ್ಯಾಲಯ ತನ್ನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಲೇಜು ಮತ್ತು ಪಾಠಶಾಲೆಯಲ್ಲಿ ಗ್ರಂಥಾಲಯ ಸ್ಥಾಪಿಸಿ.





ವಿದ್ಯಾರ್ಥಿಗಳಿಗೆ ಸಹಾಯಕವಾಗುವ ಗುಣಮಟ್ಟದ ಕೃತಿಗಳನ್ನು ಇಡಬೇಕು. ಸಂಸ್ಕೃತ ಪದವಿ, ಸ್ನಾತಕೋತ್ತರ ಪದವಿ ಪ್ರಾಧ್ಯಾಪಕರಿಗೂ ಪಿಯುಸಿ ಉಪನ್ಯಾಸಕರಿಗೆ ನೀಡುವ ವೇತನ ನೀಡಲಾಗುತ್ತಿದ್ದು. ಈ ಆಸಮಾನತೆಯನ್ನು ಸರ್ಕಾರ ತೊಲಗಿಸಬೇಕು ಎಂದು ಪ್ರಶಸ್ತಿ ಪುರಸ್ಕೃತ ಡಾ. ಆರೂಢ ಭಾರತಿ ಒತ್ತಾಯಿಸಿದರು.

ಪ್ರವಚನಕಾರ ಜೆ.ಎಸ್. ನಟೇಶ, ಕುಲಪತಿ ಪ್ರೊ. ಪದ್ಮಾಶೇಖರ್, ಕುಲಸಚಿವೆ ಎಂ. ಶಿಲ್ಪಾ. ಹಣಕಾಸು ಅಧಿಕಾರಿ ಪ್ರಕಾಶ ಆರ್. ಪಾಗೋಜಿ. ಡಾ.ಸಂತೋಷ ಹಾನಗಲ್ಲ ಉಪಸ್ಥಿತರಿದ್ದರು.

## ಪ್ರಶಸ್ತಿ ಪುರಸ್ಕೃತರು

| ಕ್ರ.ಸಂ | ಲೇಖಕರ ಹೆಸರು | ಗ್ರಂಥದ ಹೆಸರು | ಗ್ರಂಥ ಪುರಸ್ಕಾರದ ಹೆಸರು |
|---|---|---|---|
| 01 | ಡಾ.ಆರೂಢ ಭಾರತೀ | ಶ್ರೀ ಶ್ರೀ ರಾಮಕೃಷ್ಣ ಭಾಗವತಮ್ | ಪ್ರೊ.ಕೆ.ಕೃಷ್ಣಮೂರ್ತಿ |
| 02 | ಡಾ.ರಾಘವೇಂದ್ರ ಭಟ್ಟ | ಆಲವಾಲಮ್ | ಜಗ್ಗುವ ಕುಲಭೂಷಣ ಭಟ್ಟ |
| 03 | ಡಾ.ಎಮ್. ರಂಗಸ್ವಾಮಿ | ತೈಲಪ್ರಕರಣಮ್ | ಶೇಷಾಚಲ ಶರ್ಮ |
| 04 | ಡಾ.ಚಂದ್ರಕಲಾ ಆರ್.ಕೊಂಡಿ | ರಸಗಂಗಾಧರ ನಿಬಂಧ ನಿಚಯ | ಶ್ರೀಬಸಪ್ಪ ಶಾಸ್ತ್ರಿ |
| 05 | ಡಾ.ಶಿವಾನಿ,ಶ್ರೀ ಸಂತೋಷ ಮೋರೆ | Key to karaka | ಪ್ರೊ.ಸಿ.ಜೆ.ಪುರುಷೋತ್ತಮ |
| 06 | ಡಾ.ಕೆ.ನಾರಾಯಣ | ನ್ಯಾಯದರ್ಶನ | ಪ್ರೊ.ಎ.ಎನ್.ಉಪಾಧ್ಯೆ |
| 07 | ಡಾ.ಬಿ.ಪಿ. ಷಡಕ್ಷರಿ | ವೀರಶೈವಾನಂದ ಚಂದ್ರಿಕೆ ವಿಮರ್ಶಾತ್ಮಕ ಅಧ್ಯಯನ | ಆರ್.ಶ್ಯಾಮಾಶಾಸ್ತ್ರಿ |
| 08 | ಡಾ.ಉದಯನ ಹೆಗಡೆ | ಭಾರತಸ್ಯ ಆತ್ಮೋದ್ಧಾರಣಃ ಸ್ವಾಮ | ಪ್ರೊ.ಎಮ್.ಹಿರಿಯಣ್ಣ |
| 09 | ಡಾ.ಶಿವಕುಮಾರ ಸ್ವಾಮಿ | ವೀರಶೈವ ವಿವೇಚನೆ | ಪ್ರೊ.ಮಲ್ಲಿಕಾರ್ಜುನ ಪರಡ್ಡಿ |

# ಸಂಸ್ಕೃತ ಭಾಷೆ ನಿಂತ ನೀರಲ್ಲ: ಶಿವರುದ್ರ ಸ್ವಾಮೀಜಿ ಅಭಿಮತ

ವರದಿ: **ವಿದ್ವಾನ್. ಎಚ್.ಬಿ.ಗಂಗಾಧರಯ್ಯ**
**ವಿಷಯ ಪರಿವೀಕ್ಷಕರು, ತುಮಕೂರು ವಲಯ**



ಸಂಸ್ಕೃತ ಭಾಷೆ ನಿಂತ ನೀರಲ್ಲ. ಅದು ಕಾಲಕಾಲಕ್ಕೆ ಹೊಸ ರೂಪ ಪಡೆಯುವ ಮೂಲಕ ಹರಿಯುವ ನೀರಿನಂತೆ ಸಾಗುತ್ತದೆ, ಎಲ್ಲಾ ಭಾಷೆಗಳ ಮಾತೃಸ್ಥಾನವನ್ನು ಅಲಂಕರಿಸಿ ಕೊಟ್ಟಂತಹ ಶ್ರೇಷ್ಠ ಭಾಷೆಯಾಗಿದೆ ಎಂದು ತಾಲೂಕಿನ ಅಂಕನಹಳ್ಳಿ ಮಠಾಧ್ಯಕ್ಷರಾದ ಶಿವರುದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಹಿಲಿಯೂರುದುರ್ಗ ಹೋಬಳಿ ಅಂಕನಹಳ್ಳಿ ಮಠದ ಫಿರಂಗಿಸ್ವಾಮಿ ಸಂಸ್ಕೃತ ಪಾಠ ಶಾಲೆ ವತಿಯಿಂದ ಶ್ರಾವಣ ಮಾಸದ ಅಂಗವಾಗಿ ಹಮ್ಮಿಕೊಂಡಿದ ಸಂಸ್ಕೃತ ಸಪ್ತಾಹ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ವೇದ, ಶಾಸ್ತ್ರ, ಸಾಹಿತ್ಯ ಮತ್ತು ಸಂಶೋಧನೆಗೆ ಸಂಸ್ಕೃತ ಒದು ಅಗತ್ಯವಾಗಿದೆ. ಸಂಸ್ಕೃತ ಭಾಷೆ ಎಲ್ಲಾ ಭಾಷೆಗಳ ಬೆಳವಣಿಗೆಗೆ ವಿಶಿಷ್ಟವಾದ ಕೊಡುಗೆ ನೀಡಿದೆ. ಕನ್ನಡ ಸಾಹಿತ್ಯ ಮತ್ತು ಶಾಸ್ತ್ರ ಸಂಸ್ಕೃತದಿಂದ ಪ್ರೇರಣೆಗೊಂಡು ಶ್ರೀಮಂತಗೊಂಡಿದೆ. ಹೀಗಾಗಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಸಂಸ್ಕೃತ ಭೋದಿಸುವ ಮೂಲಕ ಇದರ ಬೆಳವಣಿಗೆಗೆ ಶ್ರಮಿಸಬೇಕೆಂದು ಕರೆ ನೀಡಿದರು. ಅರೆ ವಿದ್ಯೆಯಲ್ಲಿ ಸಂಸ್ಕೃತ ಮತ್ತು ಕನ್ನಡದಲ್ಲಿ ಕಾವ್ಯ ರಚನೆ ಮಾಡಿರುವ ಕನ್ನಡದ ಕವಿಗಳು ತಮ್ಮನ್ನು ಉಭಯ ಕವಿಗಳೆಂಬ



ಹೆಮ್ಮೆಹೊಂದಿದ್ದು, ಇಂದಿಗೂ ಹೆಮ್ಮೆಪಡುತ್ತಿದ್ದಾರೆ. ಸಂಸ್ಕೃತ ಸಹಸ್ರ ವರ್ಷಗಳಿಂದ ವಿವಿಧ ಪ್ರಕಾರದಲ್ಲಿ ಸಹೃದಯರಿಗೆ ಆನಂದ ನೀಡಿದ್ದರೂ 19 ನೇ ಶತಮಾನದಿಂದೀಚೆಗೆ ಅರೆ ವಿದ್ಯೆಯಲ್ಲಿ ಇರುವುದು ವಿಷಾದನೀಯ ಸಂಗತಿ ಎಂದರು.

ಅಂಲಕಾರ ಶಾಸ್ತ್ರ: ಸಂಸ್ಕೃತದಲ್ಲಿ ಅಂಲಕಾರ ಶಾಸ್ತ್ರ ಮುಖವಾದದ್ದು, ಭರತನಾಟ್ಯ ಶಾಸ್ತ್ರದ ನಾಲ್ಕು ಅಂಲಕಾರ ಶಾಸ್ತ್ರ ಇಂದಿಗೆ 124 ಶಾಸ್ತ್ರಗಳಾಗಿದ್ದು, ಸಂಸ್ಕೃತ ತನ್ನಲ್ಲಿರುವ ಅಂಶಗಳನ್ನು ಕಾಲ ಕಾಲಕ್ಕೆ ಪಡೆದುಕೊಳ್ಳುತ್ತಿದೆ. ಪ್ರಾಚೀನದಲ್ಲಿ ಸಂಸ್ಕೃತ ಕಾವ್ಯಗಳು ಇಂದಿಗೂ ಹೊಸ ರೂಪ ರೇಷೆಗಳನ್ನು ಪಡೆದುಕೊಳ್ಳುತ್ತಿದ್ದು, ಅಂಲಕಾರಶಾಸ್ತ್ರ ಸಹ ಸಂಸ್ಕೃತದಲ್ಲಿ ಹುಟ್ಟಿಕೊಂಡಿತು. ಹೀಗಾಗಿ ವಿದ್ಯಾರ್ಥಿಗಳು ಸಂಸ್ಕೃತ ಅಧ್ಯಯನ ಮಾಡುವ ಮೂಲಕ ನಮ್ಮ ದೇಶದ ಸಂಸ್ಕೃತಿಯನ್ನು ಎತ್ತಿ ಹಿಡಿಯಬೇಕೆಂದು ಸ್ವಾಮೀಜಿ ಸಲಹೆ ನೀಡಿದರು.

ಶಿಕ್ಷಕರನ್ನು ನೇಮಿಸಿ: ಅಧ್ಯಕ್ಷತೆ ವಹಿಸಿ ಮಾತನಾಡಿದ ಮುಖ್ಯ ಶಿಕ್ಷಕ ಶಿವಕುಮಾರಸ್ವಾಮಿ ಇತ್ತೀಚಿನ ದಿನಗಳಲ್ಲಿ ಸಂಸ್ಕೃತವನ್ನು ಕಡೆಗಾಣಿಸುತ್ತಿರುವುದು ಕಳವಳಕಾರಿಯಾಗಿದೆ. ಸರ್ಕಾರ ಪ್ರೌಢಶಾಲೆ,ಕಾಲೇಜುಗಳಲ್ಲಿ ಖಾಲಿ ಇರುವ ಸಂಸ್ಕೃತ ಶಿಕ್ಷಕರನ್ನು ನೇಮಕ ಮಾಡಿ ವಿದ್ಯಾರ್ಥಿಗಳ ಕಲಿಕೆಗೆ ಮುಂದಾಗಬೇಕೆಂದು ತಿಳಿಸಿದರು.

ಭಾಷೆಯ ಬೆಳವಣಿಗೆಗೆ ಶ್ರಮಿಸಿ: ಸಂಸ್ಕೃತ ಪರಿವಿಕ್ಷಕರು ಎಚ್.ಬಿ.ಗಂಗಾಧರಯ್ಯ ಮಾತನಾಡಿ, ವಿಶ್ವದಲ್ಲಿನ ಅತ್ಯಂತ ಪ್ರಾಚೀನ ಹಾಗೂ ಸಂಪದ್ಭರಿತವಾದ ಕೆಲವೇ ಭಾಷೆಗಳಲ್ಲಿ ನಮ್ಮ ಸಂಸ್ಕೃತ ಭಾಷೆಯೂ ಒಂದು. ಭಾರತೀಯರ ಜೀವನ ದರ್ಶನ ಕಲೆ, ಸಂಸ್ಕೃತಿ ಆಧ್ಯಾತ್ಮ, ವಿಜ್ಞಾನ ಇವುಗಳನ್ನು ಕುರಿತಾದ ಗ್ರಂಥಗಳು ರಚನೆಯಾಗಿದೆ ಮತ್ತು ಜಗತ್ತಿನ ಶಬ್ದ ರಚನಾ ಕೌಶಲ್ಯವನ್ನು ಹೊಂದಿರುವ ಈ ಭಾಷೆಯನ್ನು ಎಲ್ಲರೂ ಕಲಿತು ಬೆಳವಣಿಗೆಗೆ ಶ್ರಮಿಸೋಣ ಎಂದು ಹೇಳಿದರು.

# ಗುರುಪೂರ್ಣಿಮಾ ನಿಮಿತ್ತ ಗುರುವಂದನಾ ಕಾರ್ಯಕ್ರಮ

ವರದಿ: **ವಿದ್ವಾನ್ ಎಸ್.ಬಿ. ಕಾಳಗೌಡರ**
**ಅಧ್ಯಾಪಕರು, ಸಿ.ಎಲ್.ವಾಯ್. ಸಂಸ್ಕೃತ ಕಾಲೇಜು, ಧಾರವಾಡ**



ಸಿ.ಎಲ್.ವಾಯ್. ಸಂಸ್ಕೃತ ಕಾಲೇಜು ಮೂಕಾಂಬಿಕಾ ನಗರ ಧಾರವಾಡ ಇಲ್ಲಿ ದಿನಾಂಕ:26.07.2018 ಬೆಳಗ್ಗೆ 9.00 ಘಂಟೆಗೆ ಕಾಲೇಜಿನಲ್ಲಿ ಗುರುವಂದನಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ವಿದ್ಯಾರ್ಥಿಗಳ ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭ ವಾಯಿತು. ಅತಿಥಿಗಳಾಗಿ ಎನ್.ಟಿ.ಎಸ್.ಎಸ್. ಕಾಲೇಜಿನ ಉಪನ್ಯಾಸಕಿಯಾದ ಶ್ರೀಮತಿ ವಿಜಯಲಕ್ಷ್ಮಿ ಪಾಟೀಲ್ ಇವರು ಮಾತನಾಡಿ ಪ್ರತಿಯೊಬ್ಬ ಗುರು ಮುಂದೆ ನಿರ್ದಿಷ್ಟವಾದ ಗುರು ಇರಬೇಕು ಹಾಗೂ ಏಕಲವ್ಯನ ಗುರುಭಕ್ತಿ ಕಥೆಯನ್ನು ವಿವರಿಸಿ ಗುರು ಮತ್ತು ಶಿಷ್ಯರ ಸಂಬಂಧವನ್ನು ಅನ್ಯೋನ್ಯತೆಯಿಂದ ಇದ್ದ ಬಗ್ಗೆ ತಿಳಿಸಿದರು. ಕಾಲೇಜಿನ ಪ್ರಾಧ್ಯಾಪಕರಾದ ಶ್ರೀಈಶ್ವರ ಪಿ. ಭಟ್ಟ ಮಾತನಾಡಿ ಪ್ರತಿಯೊಂದು



ದೇಶವು ಉನ್ನತ ಸ್ಥಾನವನ್ನು ಹೊಂದಬೇಕಾದರೆ ಪರಂಪರೆಯು ಅತ್ಯವಶ್ಯಕವಾಗಿದೆ. ಹಾಗಾಗಿ ನಮ್ಮ ಭಾರತ ದೇಶದಲ್ಲಿ ಗುರು ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ವ್ಯಾಸ ಮಹರ್ಷಿಗಳಿಂದ ಪ್ರಾರಂಭವಾದುದರಿಂದ ಅವರ ಸ್ಮರಣಾರ್ಥ ಹಾಗೂ ಗೌರವಾರ್ಥವಾಗಿ ಈ ಗುರುಪೂರ್ಣಿಮಾ ಅಥವಾ ವ್ಯಾಸಪೂರ್ಣಿಮೆ ಪರಂಪರೆ ಬೆಳೆದು ಬಂದಿದೆ. ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣುವೇ. ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ. ಎಂಬ ಶ್ಲೋಕದ ಮುಖಾಂತರ ವ್ಯಾಸರ ಲೋಕೋಪಕಾರವನ್ನು ಸ್ಮರಿಸಿದರು. ಉಪನ್ಯಾಸಕರಾದ ಮಂಜುನಾಥ ಕೆ. ಮಾತನಾಡಿ ಈಗಿನ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ಶಿಕ್ಷೆ ಕೊಡದೆ ಎಲ್ಲ ಸೌಲಭ್ಯಗಳನ್ನು ಒದಗಿಸಿದರೂ ಕೂಡ ಶಿಕ್ಷಣದ ಗುಣಮಟ್ಟ ಕಳೆಪೆಯಾಗಿದ್ದು, ಇದು ನಮ್ಮ ರಾಷ್ಟ್ರ ದುರಂತವೆಂದು ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪ್ರಾಚಾರ್ಯರಾದ ಶ್ರೀ ಎಸ್. ಎನ್. ಇನಾಮದಾರ ಮಾತನಾಡಿ ಹಿಂದಿನ ಕಾಲದಲ್ಲಿ ಶಿಷ್ಯರು ಗುರುವಿನ ಹತ್ತಿರ ಹೋಗಿ ಗುರು ಸೇವೆಯನ್ನು ಮಾಡಿ ವಿದ್ಯೆ ಪಡೆದು ಜೀವನವನ್ನು ಸಾರ್ಥಕಪಡಿಸಿಕೊಳ್ಳುತ್ತಿದ್ದರು. ಈಗಿನ ಕಾಲದಲ್ಲಿ ಗುರುವೇ ಶಿಷ್ಯನ ಹತ್ತಿರ ಹೋಗಿ ವಿದ್ಯೆಯನ್ನು ಬೋಧಿಸುವ ಸಮಯವು ಬಂದೊದಗಿದೆ. ಗುರು ಶುಶ್ರೂಷಯಾ ವಿದ್ಯಾ ಎಂಬ ಮಹಾತ್ಮರ ವಾಕ್ಯವು ಇಂದಿಗೂ ಕೂಡ ಪ್ರಸಿದ್ಧಿಯಾಗಿದೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ, ಎಂಬ ದಾಸರ ವಾಣಿಯು ಮನುಷ್ಯನ ಜೀವನವನ್ನು ಸಾರ್ಥಕಗೊಳಿಸಲು ಸಾಧನೆಯಾಗಿದೆ ಎಂದು ಸಭಿಕರಿಗೆ ತಿಳಿಸಿದರು.

ಸದರ ಕಾರ್ಯಕ್ರಮವನ್ನು ಕಾಲೇಜಿನ ಎನ್.ಎಸ್.ಎಸ್. ಅಧಿಕಾರಿಗಳಾದ ವಿದ್ವಾನ್ ಎಸ್.ಬಿ. ಕಾಳಗೌಡರ ಕಾರ್ಯಕ್ರಮ ನಿರೂಪಿಸಿ ಎಲ್ಲರನ್ನು ವಂದಿಸಿದರು.

# ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಸಂಸ್ಕೃತ ಸಪ್ತಾಹ-2018

ವರದಿ: **ವಿದ್ವಾನ್ ಶಿವಕುಮಾರ್,** ಪ್ರಾಂಶುಪಾಲರು
ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು, ಕನಕಪುರ



ಕನಕಪುರದ ಶ್ರೀ ದೇಗುಲ ಮಠವು 700 ವರ್ಷಗಳ ಇತಿಹಾಸ ಹಾಗೂ ದಿವ್ಯ ಪರಂಪರೆಯನ್ನು ಹೊಂದಿರುವ ಮಠವಾಗಿದೆ. ಈ ಮಠದಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ, ಬರುವ ಭಕ್ತಾದಿಗಳಿಗೆ ನಿತ್ಯದಾಸೋಹವನ್ನು, ವಿದ್ಯಾದಾನ ಮಾಡುತ್ತಿರುವ ಮಠವು ವಿದ್ಯಾರ್ಥಿಗಳಿಗೆ ಆಶಾಕಿರಣವಾಗಿದೆ. ಇಂತಹ ಮಠವು ನಡೆಸುತ್ತಿರುವ ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ (ರಿ) ಎಂಬ ವಿದ್ಯಾಸಂಸ್ಥೆಯ ಅಡಿಯಲ್ಲಿ ಪ್ರಾಥಮಿಕ, ಪ್ರೌಢಶಾಲೆಗಳು, ಸಂಸ್ಕೃತ ಪಾಠಶಾಲೆಗಳು, ಸಂಸ್ಕೃತ ಕಾಲೇಜು, ಪದವಿ ಪೂರ್ವ ಕಾಲೇಜುಗಳು, ನರ್ಸಿಂಗ್, ಸಿ.ಬಿ.ಎಸ್.ಇ., ಐ.ಟಿ.ಐ., ಬಿ.ಎಡ್., ಡಿ.ಎಡ್., ಕೋರ್ಸ್‌ಗಳು ನಡೆಯುತ್ತಿದ್ದು ವಿದ್ಯಾದಾನದ ಜೊತೆಗೆ ಕಾಯಕ ಪ್ರಜ್ಞೆಯನ್ನು ಶ್ರೀಗಳು ವಿದ್ಯಾರ್ಥಿಗಳಲ್ಲಿ ಮೂಡಿಸುತ್ತಿದ್ದಾರೆ.

ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಸಂಸ್ಕೃತ ಪಾಠಶಾಲೆಗಳು, ಸಂಸ್ಕೃತ ಕಾಲೇಜು ಶ್ರೀ ಮರಳೇಗವಿ ಮಠದ ಸಂಸ್ಕೃತ ಪಾಠಶಾಲೆ, ರಾಮನಗರ ಜಿಲ್ಲೆಯ ಸಂಸ್ಕೃತ ಪಾಠಶಾಲೆಗಳು ಸಂಯುಕ್ತವಾಗಿ ಸಂಸ್ಕೃತ ಸಪ್ತಾಹ–2018 ಕಾರ್ಯಕ್ರಮವನ್ನು ಶ್ರೀ ನಿರ್ವಾಣಸ್ವಾಮಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ಈ ಸಮಾರಂಭವು 04–09–2018ರ ಮಂಗಳವಾರದಂದು ನಡೆಯಿತು.

ಈ ಸಮಾರಂಭಕ್ಕೆ ಬೆಳಿಗ್ಗೆ 10:30ಕ್ಕೆ ನಿವೃತ್ತ ಸಹ ಶಿಕ್ಷಕರಾದ ಶ್ರೀ ಶಿವರುದ್ರಯ್ಯನವರ ವೇದ ಘೋಷದೊಂದಿಗೆ ಪ್ರಾರಂಭಗೊಂಡು, ಶ್ರೀಗಳು, ಅಧ್ಯಕ್ಷರು, ಮುಖ್ಯ ಅತಿಥಿಗಳು, ಮುಖ್ಯ ಶಿಕ್ಷಕರು, ಎಲ್ಲಾ ಸನ್ಮಾನಿತರು ಆಗಮಿಸಿದರು. ನಂತರ ಸಾಂಪ್ರದಾಯಿಕವಾಗಿ ವಿಘ್ನನಿವಾರಕ ಗಣೇಶನ

ಪೂಜೆಯನ್ನು ನೆರವೇರಿಸಿ, ಕಾಲೇಜಿನ ಪ್ರಾಂಶುಪಾಲರಾದ ವಿದ್ವಾನ್ ಶ್ರೀ ಶಿವಕುಮಾರಸ್ವಾಮಿರವರ ನಿರೂಪಣೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಡಾ॥ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ವಹಿಸಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಸಂಸ್ಕೃತ ಶಿಕ್ಷಕರ ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ವಿದ್ವಾನ್ ಚಂದ್ರಶೇಖರಯ್ಯ ನವರು ವಹಿಸಿದ್ದರು. ಶ್ರೀ ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಆರ್ ಶಿವಯ್ಯನವರು, ಶ್ರೀ ನಿರ್ವಾಣಸ್ವಾಮಿ ವಸತಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಎಸ್.ಎಂ ಬಸವರಾಜುರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನಮ್ಮ ಪಾಠಶಾಲೆಯ ನಿವೃತ್ತ ಮುಖ್ಯ ಶಿಕ್ಷಕರಾದ ಶ್ರೀಯುತ ಎಸ್ ಶಿವಣ್ಣನವರು, ಶ್ರೀ ಶಿವಯೋಗಿ ಮುನೀಶ್ವರ ಸಂಸ್ಕೃತ ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕರಾದ ಸಿ.ಎಂ ಚಿಕ್ಕೆಂಪಯ್ಯನವರು ಮತ್ತು ಆಡಳಿತ ಮಂಡಳಿಯ ಕಛೇರಿ ಮೇಲ್ವಿಚಾರಕರಾದ ಪ್ರಭುಸ್ವಾಮಿರವರು ಹಾಗೂ ನಮ್ಮ ಸಂಸ್ಥೆಯ ಎಲ್ಲಾ ಸಂಸ್ಕೃತ ಪಾಠಶಾಲೆಗಳ ಮುಖ್ಯ ಶಿಕ್ಷಕರುಗಳು, ರಾಮನಗರ ಜಿಲ್ಲೆಯ ಎಲ್ಲಾ ಸಂಸ್ಕೃತ ಪಾಠಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಸಂಸ್ಕೃತ ಪಾಠಶಾಲೆ, ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಎಲ್ಲಾ ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮವು ಸಂಸ್ಕೃತ ಪಾಠಶಾಲೆಯ ಪ್ರಥಮಾ ಎರಡನೇ ತರಗತಿಯ ವಿದ್ಯಾರ್ಥಿಗಳಾದ ರಾಹುಲ್ ತಂಡದವರಿಂದ ಸುಶ್ರಾವ್ಯವಾದ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದ ನಮ್ಮ ಪಾಠಶಾಲೆಯ ಮುಖ್ಯ ಶಿಕ್ಷಕರಾದ ವಿದ್ವಾನ್ ಶ್ರೀ ಮಹಾಲಿಂಗ ಪ್ರಭುರವರು ಪ್ರಾಸ್ತಾವಿಕ ನುಡಿಯನ್ನು ಹೇಳುತ್ತಾ, 1948ರಲ್ಲಿ ಗುರುಕುಲ ಶಿಕ್ಷಣ ಮಾದರಿಯಲ್ಲಿ ನಮ್ಮ ಪಾಠಶಾಲೆಯು 15ಜನ ವಿದ್ಯಾರ್ಥಿಗಳು ಮತ್ತು ಒಬ್ಬ ಶಿಕ್ಷಕರಿಂದ ಪ್ರಾರಂಭವಾಗಿ ಇಂದು 5ಜನ ಶಿಕ್ಷಕರು ಮತ್ತು 300ಕ್ಕೂ ಹೆಚ್ಚು ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 2011ರಲ್ಲಿ ಶ್ರೀಗಳ ಸಂಸ್ಕೃತದ ಮೇಲಿನ ಪ್ರೀತಿಯಿಂದ 5 ಸಂಸ್ಕೃತ ಪಾಠಶಾಲೆಗಳು ಮತ್ತು 2012ರಲ್ಲಿ ಉನ್ನತ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡುವ ಸದುದ್ದೇಶದಿಂದ ಡಾ॥ ಮಲ್ಲೇಪುರಂ ಜಿ ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು ಪ್ರಾರಂಭವಾಗಿ ಬಿ.ಎ ಶಾಸ್ತ್ರ, ಎಂ.ಎ ಆಚಾರ್ಯ ತರಗತಿಗಳು ನಡೆದುಕೊಂಡು ಬರುತ್ತಿವೆ. ಹಾಗೆಯೇ 2013ನೇ ಸಾಲಿನಲ್ಲಿ ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಪಾಠಶಾಲೆಗಳು ಕಾಲೇಜಿನ ನೇತೃತ್ವದಲ್ಲಿ 3ದಿನಗಳ ಕಾಲ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ನಾಡಿನ ಅನೇಕ ವಿದ್ವಾಂಸರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಅಧಿಕಾರಿಗಳ ಸಮ್ಮುಖದಲ್ಲಿ ಸಂಸ್ಕೃತೋತ್ಸವ ಅದ್ದೂರಿಯಾಗಿ ನೆರವೇರಿಸಲಾಯಿತು. ಹಾಗೆಯೇ ಈ ದಿನ ಸಂಸ್ಕೃತ ಸಪ್ತಾಹಃ ಕಾರ್ಯಕ್ರಮವು ರಾಮನಗರ ಜಿಲ್ಲೆಯ ಎಲ್ಲಾ ಪಾಠಶಾಲೆಗಳ ಮತ್ತು ಕಾಲೇಜಿನ ಸಹಯೋಗದೊಂದಿಗೆ ನಡೆಯುತ್ತಿದ್ದು ಈ ಸಮಾರಂಭವು ಯಶಸ್ವಿಯಾಗಿ ಸಂಸ್ಕೃತದ ಕಂಪು ಎಲ್ಲೆಡೆ ಪಸರಿಸಲಿ ಎಂದು ಎಲ್ಲಾ ಗಣ್ಯರನ್ನು ಸಮಾರಂಭಕ್ಕೆ ಆಹ್ವಾನಿಸಿದರು. ಸಮಾರಂಭಕ್ಕೆ ಆಗಮಿಸಿರುವ ಶ್ರೀಗಳನ್ನು, ಅಧ್ಯಕ್ಷರನ್ನು, ಮುಖ್ಯ ಅತಿಥಿಗಳನ್ನು, ನಿವೃತ್ತ ಮುಖ್ಯ ಶಿಕ್ಷಕರನ್ನು, ರಾಮನಗರ ಜಿಲ್ಲೆಯ ಎಲ್ಲಾ ಸಂಸ್ಕೃತ ಪಾಠಶಾಲೆಯ ಮುಖ್ಯ ಶಿಕ್ಷಕರನ್ನು ಮತ್ತು ಶಿಕ್ಷಕ ವೃಂದದವರನ್ನು ಶಾಲಾ ಕಾಲೇಜಿನ ವಿದ್ಯಾರ್ಥಿ ವೃಂದವನ್ನು ಸಮಾರಂಭಕ್ಕೆ ಸಹ ಶಿಕ್ಷಕರಾದ ಆರ್.ಸಿ ಚಿಕ್ಕಲಿಂಗಪ್ಪನವರು ಸ್ವಾಗತಿಸಿದರು. ನಂತರ ಕಾರ್ಯಕ್ರಮದ ಉದ್ಘಾಟನೆಯು ಶ್ರೀಗಳ ಅಧ್ಯಕ್ಷರ ಮುಖ್ಯ ಅತಿಥಿಗಳ ದೀಪ ಪ್ರಜ್ವಾಲನೆಯೊಂದಿಗೆ ನೆರವೇರಿತು.

ಉದ್ಘಾಟನಾ ಭಾಷಣದಲ್ಲಿ ಶ್ರೀ ಆರ್

ಶಿವಯ್ಯನವರು ಮಾತನಾಡುತ್ತಾ ಗುರುಕುಲ ಶಿಕ್ಷಣದ ಮಾದರಿಯಲ್ಲಿ ನಡೆಯುತ್ತಿದ್ದ ಸಂಸ್ಕೃತ ಶಿಕ್ಷಣವು ಆಧುನಿಕ ಶಿಕ್ಷಣದ ರಭಸದಲ್ಲಿಯೂ ಕೂಡ ಪ್ರಜ್ವಲಿಸುತ್ತಿರುವುದನ್ನು ಕಂಡು ಸಂತೋಷವಾಗುತ್ತಿದೆ. ಶ್ರೀಗಳ ಸಂಸ್ಕೃತ ಮೇಲಿನ ಪ್ರೀತಿಯುನ್ನು ಹೊಗಳುತ್ತಾ ಸಂಸ್ಕೃತದ ದುಂದುಬಿಯು ಎಲ್ಲೆಡೆ ಮೊಳಗಲಿ ಎಂದು ಹಾರೈಸಿದರು. ನಂತರ ರೋಹಿತ್ ಮತ್ತು ತಂಡದವರಿಂದ ಸುಶ್ರಾವ್ಯವಾಗಿ ಶಿಷ್ಟಾಚಾರ ಶ್ಲೋಕದ ಪಠನೆಯಾಯಿತು. ನಂತರ ಅಧ್ಯಕ್ಷತೆ ವಹಿಸಿದ್ದ ಶ್ರೀ ಚಂದ್ರಶೇಖರಯ್ಯನವರು ಮಾತನಾಡುತ್ತಾ ಸಂಸ್ಕೃತ ಶಿಕ್ಷಣವು ಪುರೋಹಿತಶಾಹಿಗಳ ಕಪಿಮುಷ್ಟಿಯಿಂದ ಮುಕ್ತವಾಗಿದ್ದು ಮಠ ಮಾನ್ಯಗಳು ಪ್ರಾರಂಭ ಮಾಡಿದ ಪಾಠಶಾಲೆಗಳಿಂದ ಎಲ್ಲಾ ಧರ್ಮದ ಮಕ್ಕಳು ವ್ಯಾಸಂಗ ಮಾಡಿ ಉನ್ನತ ಹುದ್ದೆಗಳಲ್ಲಿ ವಿರಾಜಮಾನರಾಗಿದ್ದಾರೆ. ನೀವೂ ಸಹ ಸಂಸ್ಕೃತವನ್ನು ಚೆನ್ನಾಗಿ ವ್ಯಾಸಂಗ ಮಾಡಿದರೆ ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ ಎಂದು ತಿಳಿಸಿದರು. ಮುಂದೆ ವಿನೋದ ಮತ್ತು ತಂಡದವರು "ವಂದೇ ಮಾತರಂ" ಗೀತೆಯನ್ನು ಲಯಬದ್ಧವಾಗಿ ಹಾಡಿದರು. ಮುಂದೆ ಇನ್ನೊಬ್ಬ ಮುಖ್ಯ ಅತಿಥಿಗಳಾದ ಶ್ರೀ ಎನ್.ಎಂ ಬಸವರಾಜುರವರು ಪಂಚದ್ರಾವಿಡ ಭಾಷೆಗಳಿಗೆ ತಾಯಿಯಂತಿರುವ ಸಂಸ್ಕೃತ ಭಾಷೆಯನ್ನು ಕಲಿತರೆ ಐದು ಭಾಷೆಗಳನ್ನು ಕಲಿತಂತೆಯೇ, ಈ ಭಾಷೆಯ ಪ್ರಭಾವ ಎಲ್ಲಾ ಭಾಷೆಗಳ ಮೇಲೂ ಆಗಿದೆ ಎಂಬುದನ್ನು ಉದಾಹರಣೆಯ ಸಮೇತ ತಿಳಿಸಿದರು. ಮುಂದೆ ಮಹಾಲಿಂಗಸ್ವಾಮಿ ಸಂಸ್ಕೃತ ಪಾಠಶಾಲೆ ಕೆ.ಎನ್.ಎಸ್ ಸರ್ಕಲ್ ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮವು ಮತ್ತು ಶ್ರೀ ಮರಳೇಗವಿಮಠದ ಸಂಸ್ಕೃತ ಪಾಠಶಾಲೆಯ ಮಕ್ಕಳು ಪುಣ್ಯಕೋಟಿ ಗೀತೆಯನ್ನು ಹಾಡಿ ಎಲ್ಲರನ್ನೂ ರಂಜಿಸಿದರು. ಸನ್ಮಾನಿತ ಶಿಕ್ಷಕರ ಪರವಾಗಿ ಮಾತನಾಡಿ ಶ್ರೀಯುತ ಸಿ.ಎಂ ಚಿಕ್ಕೆಂಪಯ್ಯನವರು ಸಂಸ್ಕೃತ ಶಿಕ್ಷಣದ ಮೇಲೆ ಪ್ರೀತಿ ಬರಲು ಶ್ರೀ ಕ್ಷೇತ್ರವೇ ಕಾರಣ ಇಲ್ಲಿ ಅಭ್ಯಾಸ ಮಾಡಿದ ನಾವೇ ಧನ್ಯರು ಎಂದು ಹೇಳಿದರು.

ಸಮಾರಂಭದ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಶ್ರೀಗಳು ತಮ್ಮ ಆಶೀರ್ವಚನದಲ್ಲಿ ಸಂಸ್ಕೃತ ಶಿಕ್ಷಣವು ಸಂಸ್ಕೃತಿಯ ರಕ್ಷಣೆಗಾಗಿ ಇದೆ. ಇದರ ಅಭ್ಯಾಸದಿಂದ ಮನಸ್ಸು ನಿರ್ಮಲವಾಗಿ, ಶ್ಲೋಕಗಳನ್ನು ಪಠಿಸುವುದರಿಂದ ಏಕಾಗ್ರತೆಯು, ಕೋಶವನ್ನು ಓದುವುದರಿಂದ ಸಾಮಾನ್ಯ ಜ್ಞಾನವು, ವ್ಯಾಕರಣವನ್ನು ಅಭ್ಯಾಸ ಮಾಡುವುದರಿಂದ ಭಾಷೆಗಳ ಮೇಲಿನ ಹಿಡಿತವು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಮುಂದೆ ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಪಾಠಶಾಲೆಯ ಸಿಬ್ಬಂದಿ ವರ್ಗದವರಿಂದ ಮತ್ತು ಅಧ್ಯಕ್ಷರು ಮುಖ್ಯ ಅತಿಥಿಗಳು ಶ್ರೀಗಳಿಗೆ ಗೌರವ ಸಮರ್ಪಣೆಯನ್ನು ಮಾಡಲಾಯಿತು. ಪಾಠಶಾಲೆಯ ಸಹ ಶಿಕ್ಷಕಿಯಾದ ವಿದೂಷಿ ವಿ.ಎಲ್ ಧನಲಕ್ಷ್ಮಿಯವರು ಸಮಾರಂಭಕ್ಕೆ ಆಗಮಿಸಿರುವ ಅಧ್ಯಕ್ಷರು, ಮುಖ್ಯ ಅತಿಥಿಗಳು, ರಾಮನಗರ ಜಿಲ್ಲೆಯ ಎಲ್ಲಾ ಸಂಸ್ಕೃತ ಪಾಠಶಾಲೆಗಳ ಮುಖ್ಯ ಶಿಕ್ಷಕರನ್ನು, ಆಡಳಿತ ಮಂಡಳಿಯ ಸಿಬ್ಬಂದಿ ವರ್ಗದವರನ್ನು, ನಿವೃತ್ತ ಮುಖ್ಯ ಶಿಕ್ಷಕರುಗಳಿಗೆ, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿ ವೃಂದಕ್ಕೆ ಅಭಿನಂದನೆಯನ್ನು ಸಲ್ಲಿಸಿ ಐಕ್ಯಮಂತ್ರದ ಪಠನೆಯೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಈ ಸಮಾರಂಭದಲ್ಲಿ ಪಾಠಶಾಲೆ ಶಿಕ್ಷಕರಾದ ವೀರಭದ್ರಪ್ಪ, ಆನಂದ್ ಕುಮಾರ್ ಪಿ.ಎನ್, ಶ್ರೀ ಮಹಾಲಿಂಗಸ್ವಾಮಿ ಸಂಸ್ಕೃತ ಪಾಠಶಾಲೆ ಕೆ.ಎನ್.ಎಸ್ ಸರ್ಕಲ್ ಮುಖ್ಯ ಶಿಕ್ಷಕರಾದ ಡಿ.ಜಿ ಲೋಕೇಶ್‌ರವರು, ಶ್ರೀ ಮಹಾಲಿಂಗಸ್ವಾಮಿ ಸಂಸ್ಕೃತ ಪಾಠಶಾಲೆ ಹುಣಸನಹಳ್ಳಿ ಮುಖ್ಯ ಶಿಕ್ಷಕರಾದ ಜಯಶಂಕರ್ ರವರು ಮತ್ತು ಶ್ರೀ ಮಹಾಲಿಂಗೇಶ್ವರ ಸಂಸ್ಕೃತ ಪಾಠಶಾಲೆ ವಿ.ಜಿ ದೊಡ್ಡಿ ಮುಖ್ಯ ಶಿಕ್ಷಕರಾದ ವಿದ್ವಾನ್ ಅಮರಗುಂಡರವರು ಉಪಸ್ಥಿತರಿದ್ದು, ಕಾರ್ಯಕ್ರಮಕ್ಕೆ ಶೋಭೆ ತಂದರು.

# ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜಿನ ಸಂಸ್ಕೃತೋತ್ಸವ - 2018

ವರದಿ: **ವಿದ್ವಾನ್ ರಾಮಚಂದ್ರ ಭಟ್ಟ**, ಪ್ರಾಚಾರ್ಯರು
ಶ್ರೀಮಾತಾ ಸಂಸ್ಕೃತ ಕಾಲೇಜಿನ, ಉಮ್ಮಚಗಿ



2018–19ನೇ ಸಾಲಿನ ಸಂಸ್ಕೃತೋತ್ಸವವನ್ನು ಶ್ರೀಮಾತಾ ಸಂಸ್ಕೃತ ಕಾಲೇಜಿನ ವತಿಯಿಂದ ಮನಸ್ವಿನೀ ವಿದ್ಯಾಲಯದಲ್ಲಿ 04.09.2018ರಂದು ನಡೆಸಲಾಯಿತು. ವಿದ್ಯಾಲಯದ ಮುಖ್ಯೋಧ್ಯಾಪಕರಾದ ಶ್ರೀಮತಿ ವಾಣೀ ಭಟ್ಟ ಇವರು ಅಧ್ಯಕ್ಷತೆಯನ್ನು ವಹಿಸಿದರು. ಸಂಸ್ಕೃತ ಭಾಷೆ ಭಾರತದ ಸಂಸ್ಕೃತಿಯ ಪ್ರತೀಕವಾಗಿದೆ. ಆದ್ದರಿಂದ ಅದನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ನಮ್ಮ ಮೇಲಿದೆ. ಸಂಸ್ಕೃತದಲ್ಲಿ ಅಪಾರವಾದ ಜ್ಞಾನ ಅಡಕವಾಗಿದೆ ಎಂದರು. ಶ್ರೀಮಾತಾ ಸಂಸ್ಕೃತ ಕಾಲೇಜಿನಲ್ಲಿ ವಿ॥ ರಾಜೇಶ ಶಾಸ್ತ್ರಿ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ರವಿ ಜೋಶಿ ಇವರು ಸಂಸ್ಕೃತ ಗೀತೆಯನ್ನು ಹಾಡಿದರು. ಮನಸ್ವಿನೀ ವಿದ್ಯಾಲಯದ ಮಕ್ಕಳು ವಿವಿಧ ಸಂಸ್ಕೃತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ವಿದ್ವಾನ್ ಪ್ರಸನ್ನ ಭಟ್ಟ ಇವರು ಕಾರ್ಯಕ್ರಮವನ್ನು ನಿರ್ವಹಿಸಿದರು.

05.09.2018 ರಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಉಮ್ಮಚಗಿ, ಇಲ್ಲಿಯ ಸಂಸ್ಕೃತೋತ್ಸವವನ್ನು ಶ್ರೀಮಾತಾ ಸಂಸ್ಕೃತ ಕಾಲೇಜಿನ ಸಹಯೋಗದಲ್ಲಿ ಆಚರಿಸಲಾಯಿತು. ಶಾಲೆ



ಮುಖ್ಯೋಧ್ಯಾಪಕರಾದ ಶ್ರೀಮತೀ ಗೌರೀ ಭಟ್ಟ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಸಂಸ್ಕೃತದಲ್ಲಿರುವ ಸತ್ಯ, ಧರ್ಮ, ಸಮಾನತೆ ಇತ್ಯಾದಿ ಸದ್ಗುಣಗಳನ್ನು ನಾವು ಮೈಗೂಡಿಸಿಕೊಳ್ಳ ಬೇಕೆಂದು ಕರೆ ನೀಡಿದರು. ಮುಖ್ಯ ಅತಿಥಿಗಳಾದ ಯಶೋಧಾ ಭಟ್ಟ ಇವರು ಕಾರ್ಯಕ್ರಮವನ್ನು ನಿರ್ವಹಿಸಿದರು ನಂತರ ಮಕ್ಕಳು ಸಂಸ್ಕೃತ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು.

06.09.2018 ರಂದು ಶ್ರೀಮಾತಾ ಸಂಸ್ಕೃತ ವೈದಿಕ ಶಿಕ್ಷಣ ಸಂಸ್ಥೆಯ, ಶ್ರೀಮಾತಾ ಸಂಸ್ಕೃತ ಕಾಲೇಜಿನ ಸಂಸ್ಕೃತೋತ್ಸವ ಕಾರ್ಯಕ್ರಮವು ನೆರವೇರಿತು. ವೇ. ವಿಶ್ವೇಶ್ವರ ಶಾಸ್ತ್ರೀ ಸೋಂದಾ ಹಿರಿಯ ವೈದಿಕರು ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಪ್ರಾರಂಭವಾದವು. ಶ್ರೀ ರಾಜರಾಜೇಶ್ವರೀ ಸಂಸ್ಕೃತ ಕಾಲೇಜಿನ ಮೀಮಾಂಸಾ ಸಹಾಯಕ ಪ್ರಾಧ್ಯಾಪಕರಾದ ಡಾ. ವಿನಾಯಕ ಭಟ್ಟ ಗುಂಜಗೋಡ ಇವರು ಸಂಸ್ಕೃತ, ಸಂಸ್ಕೃತಿ ಇದರ ಬಗ್ಗೆ ವಿವರಿಸಿದರು. ವಿ॥ ರಾಜೇಶ ಶಾಸ್ತ್ರೀ ಸಹಾಯಕ ಪ್ರಾಧ್ಯಾಪಕರು (ವ್ಯಾಕರಣ) ಇವರು ಉಪಸ್ಥಿತರಿದ್ದರು. ನಂತರ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿ ಕಾರ್ಯಕ್ರಮವು ನಡೆದವು. ವಂದನಾರ್ಪಣೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

# ಶ್ರೀ ಶಿವಯೋಗೀಶ್ವರ ಸಂಸ್ಕೃತ ಪಾಠಶಾಲೆ, ಇಂಚಲದಲ್ಲಿ ಸಂಸ್ಕೃತ ಸಪ್ತಾಹ

ವರದಿ: **ವಿದ್ವಾನ್ ಎಸ್.ಡಿ. ಕರಾಡೆ**
ಮುಖ್ಯೋಪಾಧ್ಯಯರು



ಶ್ರೀ ಶಿವಯೋಗೀಶ್ವರ ಸಂಸ್ಕೃತ ಪಾಠಶಾಲೆ ಇಂಚಲ ತಾ. ಸವದತ್ತಿ ಜಿ.ಬೆಳಗಾವಿ ಇಲ್ಲಿ ದಿನಾಂಕ: 23.08.2018 ರಿಂದ 31.08.2018 ರಂದು ಸಂಸ್ಕೃತ ಸಪ್ತಾಹ ಕಾರ್ಯಕ್ರಮ ನಿಮಿತ್ಯ ಶ್ರೀ ಶಿವಯೋಗೀಶ್ವರ ಪ್ರೌಢ ಶಾಲೆ ಹಾಗೂ ಶ್ರೀ ಶಿವಯೋಗೀಶ್ವರ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಇಂಚಲ ಇಲ್ಲಿ 09 ದಿನಗಳ ಪರ್ಯಂತರ ಸಂಸ್ಕೃತ ಸಂಭಾಷಣೆ ಶಿಬಿರ ಏರ್ಪಡಿಸಿ, ದಿನಾಂಕ 31/08/2018 ರಂದು ಸಾಯಂಕಾಲ 4.00 ಗಂಟೆಗೆ ಸಂಸ್ಕೃತ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಿ ವಿಜೃಂಭಣೆಯಿಂದ ಆಚರಿಸಲಾಯಿತು. ಇಂಚಲ ಶ್ರೀ ಶಿವಯೋಗೀಶ್ವರ ಸಂಸ್ಕೃತ ಪಾಠಶಾಲೆ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಸಂಸ್ಕೃತ ವಿಶ್ವವಿದ್ಯಾಲಂಯು ಬೆಂಗಳೂರು ಇವರ ಸಹಯೋಗದಲ್ಲಿ ಶ್ರಾವಣ ಮಾಸದ ನಿಮಿತ್ಯ ಸಂಸ್ಕೃತ ಸಪ್ತಾಹ ಕಾರ್ಯಕ್ರಮ ಜರುಗಿತು. ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಸದ್ಗುರು ಡಾ. ಶಿವಾನಂದ ಭಾರತಿ ಮಹಾಸ್ವಾಮಿಜಿಯವರು ವಹಿಸಿದ್ದರು. ಸಂಸ್ಕೃತ ಭಾಷೆ ದೇವನಾಗರಿ ಭಾಷೆಯಾಗಿದ್ದು ಎಲ್ಲರೂ ಶ್ರದ್ಧೆಯಿಂದ ಅಧ್ಯಯನ ಮಾಡಬೇಕೆಂದು ಕರೆನೀಡಿದರು. ಸಪ್ತಾಹದ ಉದ್ಘಾಟನೆ ಮಾಡಿದ ಸಂಸ್ಕೃತ



ವಿಶ್ವವಿದ್ಯಾಲಯದ ನಿರ್ದೇಶಕರಾದ ಡಾ॥ ವಿ. ಗಿರೀಶ್ಚಂದ್ರರವರು ಮಾತನಾಡುತ್ತಾ ಸಂಸ್ಕೃತ ಭಾಷೆಯ ಅವಶ್ಯಕತೆ ಹಾಗೂ ವೈವಿಧ್ಯತೆಯನ್ನು ವಿವರಿಸಿದರು. ಸಂಸ್ಕೃತ ಸಪ್ತಾಹದ ಉದ್ದೇಶವನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು. ಅತಿಥಿ ಉಪನ್ಯಾಸಕರಾದ ಮಂಜುನಾಥ ಭಟ್ಟ ಇವರು ಮಾತನಾಡುತ್ತಾ ಸಂಸ್ಕೃತ ಭಾಷೆ ಇಂದಿನ ವಿದ್ಯಾರ್ಥಿಗಳಿಗೆ ಭಾಷಾಭ್ಯಾಸ ಮಾಡಿಸುವಲ್ಲಿ ತುಂಬಾ ಸಹಾಯಕಾರಿಯಾಗಿದೆ ಹಾಗೂ ಉಚ್ಚಾರಣೆ ತುಂಬಾ ಸುಧಾರಣೆ ಆಗುತ್ತದೆ ಎಂದು ಹೇಳಿದರು. ಶಿಕ್ಷಣ ಸಂಸ್ಥೆಯ ಮಾಜಿ ಚೇರಮನ್‌ರಾದ ಎಸ್ ಎಮ್ ರಾಹುತನರ ಮಾತನಾಡಿ, ಸಂಸ್ಕೃತ ಭಾಷೆಯನ್ನು ಕಲಿಯುವದರಿಂದ ಮಾನವನ ಜೀವನ ಸಾರ್ಥಕವಾಗುತ್ತದೆ ಎಂದರು. ಸಂಸ್ಥೆಯ ಚೇರಮನ್‌ರಾದ ಡಿ.ಬಿ.ಮಲ್ಲೂರ ಸಪ್ತಾಹದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಸಂಸ್ಕೃತ ಭಾಷೆ ನಮ್ಮ ತಾಯಿ ಭಾಷೆಯಾಗಿದ್ದು ನಾವೆಲ್ಲರೂ ಸೇರಿ ಇದನ್ನು ಜನರ ಆಡು ಭಾಷೆಯನ್ನಾಗಿ ಪರಿವರ್ತಿಸಬೇಕೆಂದರು ಹಾಗೂ ಸಂಸ್ಕೃತ ಭಾಷೆ ಉಳಿವಿಗಾಗಿ ನಾವೆಲ್ಲರೂ, ಇಂದು ಪಣ ತೊಟ್ಟು ಕಾರ್ಯನಿರ್ವಹಿಸಬೇಕೆಂದು ಕರೆನೀಡಿದರು. ವಿದ್ಯಾರ್ಥಿಗಳು ವಸ್ತು ಪ್ರದರ್ಶನ ಏರ್ಪಡಿಸಿ, ದಿನ ನಿತ್ಯ ಬಳಸುವ ಅನೇಕ ವಸ್ತುಗಳನ್ನು ಸಂಸ್ಕೃತದಲ್ಲಿ ವಿವರಿಸಿದರು. ಸುಮಾರು ಮೂರನೂರಕ್ಕೂ ಹೆಚ್ಚು ವಸ್ತುಗಳನ್ನು ಪ್ರದರ್ಶನ ಏರ್ಪಡಿಸಿದರು. ವಸ್ತು ಪ್ರದರ್ಶನ ಅತ್ಯಂತ ಮನಮೋಹಕವಾಗಿದ್ದು ಜನರನ್ನು ತುಂಬಾ ಆಕರ್ಷಿಸಿದೆ. ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಎಸ್.ಡಿ. ಕರಾಡೆಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ. ಡಿ ನಾಯಕ ಸರ್ವರನ್ನೂ ಸ್ವಾಗತಸಿದರು. ಪ್ರೌಢಶಾಲೆ ಮುಖ್ಯೋಪಾಧ್ಯಾಯರಾದ ಬಿ.ಪಿ. ತುಪ್ಪದ ವಂದನಾರ್ಪಣೆಯನ್ನು ಮಾಡಿದರು

# ಆವಾಸೀಯ ಸಂಸ್ಕೃತ ಭಾಷಾ ಪ್ರವೇಶ ಬೋಧನ ವರ್ಗ

ವರದಿ: **ವಿದ್ವಾನ್ ಕೃಷ್ಣ**
**ಸಂಸ್ಕೃತ ಭಾರತೀ, ನಗರ ಸಂಯೋಜಕರು, ದೊಡ್ಡಬಳ್ಳಾಪುರ**



ದಿನಾಂಕ: 04.05.2018ರಿಂದ 11.05.2018ರ ವರೆಗೆ ಎಂಟು ದಿನಗಳ ಕಾಲ "ಶ್ರೀ ಪುಷ್ಪಾಂಡಜ ಮಹರ್ಷಿ ಆಶ್ರಮ ತಪಸೀಹಳ್ಳಿ, ದೊಡ್ಡಬಳ್ಳಾಪುರ ದಲ್ಲಿ ಶ್ರೀ ದಿವ್ಯಜ್ಞಾನಾನಂದಗಿರಿ ಸ್ವಾಮೀಜಿಯವರ ಕೃಪಾಶೀರ್ವಾದದಲ್ಲಿ ಎಂಟು ದಿನಗಳ ಕಾಲ" ಸಂಸ್ಕೃತ ಭಾಷಾ ಪ್ರವೇಶ ಭೋಧನ ವರ್ಗವು ಯಶಸ್ವಿಯಾಗಿ ನಡೆಯಿತು. ಒಟ್ಟು 136 ಶಿಬಿರಾರ್ಥಿ ಗಳು ಭಾಗವಹಿಸಿದ್ದರು. ದಿ: 04.05.2018ರ ಬೆಳಿಗ್ಗೆ ನಡೆದ ಉದ್ಘಾಟನೆ ಸಮಾರಂಭದಲ್ಲಿ ದಿವ್ಯ ಸಾನ್ನಿಧ್ಯ ವನ್ನು ವಹಿಸಿದ್ದಂತಹ ಸ್ವಾಮೀಜಿಯವರು ಆಶ್ರಯ ಹಾಗೂ ಸಂಸ್ಕೃತ ಭಾಷೆಯ ಮಹತ್ವವನ್ನು ತಿಳಿಸಿ ಸಮಾಜಮುಖಿ ಕಾರ್ಯಕ್ರಮಗಳಿಗೆ ಸರ್ವ ಸಹಕಾರ ವನ್ನು ನೀಡುವುದಾಗಿ ತಿಳಿಸಿ ಆಶೀರ್ವದಿಸಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿರ್ದೇಶಕರಾದ ಡಾ. ವಿ. ಗಿರೀಶ್ಚಂದ್ರರವರು ಸಂಸ್ಕೃತ ಭಾಷೆಯ ಮಹತ್ವ ,ಕಲಿಯುವುದರಿಂದ ಪ್ರಯೋಜನಗಳು ಹಾಗೂ ಸಂಸ್ಕೃತವು ದೇಶ ವಿದೇಶಗಳಿಗೂ ವ್ಯಾಪಿಸಿರುವ ವಿಷಯಗಳನ್ನು ಸುಂದರ ಸರಳ ವಚನಗಳಿಂದ ತಿಳಿಸಿ ಮಾರ್ಗದರ್ಶಿಸಿದರು.

ಅತಿಥಿಗಳಾಗಿ ಬಮೂಲ್ ಅಧ್ಯಕ್ಷರಾದ ಶ್ರೀ ಅಪ್ಪಯ್ಯಣ್ಣ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ನಾರಾಯಣಪ್ಪರವರು ಹಾಜರಿದ್ದರು. ಶಿಬಿರಾಧ್ಯಕ್ಷರಾದ ಶ್ರೀ ರುದ್ರೇಶ್ವರ ಸಂಸ್ಕೃತ ಮಹಾಪಾಠಶಾಲೆಯ ಅಧ್ಯಾಪಕರಾದ 'ಎಲ್ ನಾಗಭೂಷಣರಾವ್ ಸಂಸ್ಕೃತ ಭಾರತೀ' ಜಿಲ್ಲಾ ಸಂಯೋಜಕ ಉತ್ತರದಾಯಿತ್ವವನ್ನು ಸ್ವೀಕರಿಸಿದ್ದು, ಕೊಂಗಾಡಿಯಪ್ಪ ಪಾಠಶಾಲಾ ಶಿಕ್ಷಕರಾದ ಭಾಸ್ಕರ, ಸಂಸ್ಕೃತ ಭಾರತೀ ಹೊಸಕೋಟೆ, ಸಂಯೋಜಕರಾದ ಧೀರಜ್ ಹಾಗೂ ದೊಡ್ಡಬಳ್ಳಾಪುರ ನಗರ ಸಂಯೋಜಕರು ಕೃಷ್ಣ ಮತ್ತಿತರರು ಹಾಜರಿದ್ದರು. ದಿನಾಂಕ: 10.05.2018ರ ಮಧ್ಯಾಹ್ನ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀ ಸ್ವಾಮೀಜಿಯವರ ಘನ ಉಪಸ್ಥಿತಿಯಲ್ಲಿ ನೆರವೇರಿತು. ಕಾರ್ಯಕ್ರಮದಲ್ಲಿ 'ಸಂಸ್ಕೃತ ಭಾರತೀ'ಯ ಸತ್ಯನಾರಾಯಣ ಮಹೋದಯ ಹಾಗೂ ಶಿಬಿರಾಧ್ಯಕ್ಷರಾದ 'ಎಲ್. ನಾಗಭೂಷಣ್'ರವರು ವೇದಿಕೆ ಯನ್ನು ಅಲಂಕರಿಸಿದ್ದರು. ತುಂಬಾ ಸುಂದರವಾದ, ಮನೋಹರವಾದ ನಾಟಕ, ನೃತ್ಯ, ಸಂಭಾಷಣಾ ಪ್ರದರ್ಶನ ಇತ್ಯಾದಿ ಸಾಂಸ್ಕೃತಿಕ ಶಿಬಿರಾರ್ಥಿಗಳು ತಾವು ಕಲಿತ ಸಂಸ್ಕೃತ ಭಾಷೆಯಲ್ಲಿ ತಮ್ಮ ಅನುಭವವನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಭಾಸ್ಕರ.ಎನ್ ಹೊಸಕೋಟೆ ಸಂಯೋಜಕರಾದ ಧೀರಜ್, ದೊಡ್ಡಬಳ್ಳಾಪುರ ನಗರ ಸಂಯೋಜಕರು ಕೃಷ್ಣ, ಶಿಕ್ಷಕರಾದ ಮೋಹನ್, ದೇವಜಿತ್ ಶೈಲೇಶ್, ಶಂಕರ, ಸುರೇಶ, ಆದರ್ಶ, ರಾಘವ, ರೇಷ್ಮಾ, ವನಜಾ, ಜ್ಯೋತ್ಸ್ನಾ ಮುಂತಾದವರು ಹಾಜರಿದ್ದರು.